Reg. No. M. 1550

22–5–1936

'KODAGU'
THE ONLY OLDEST WEEKLY OF COORG.

IF NOT
delivered
please return to
"KODAGU"
OFFICE,
MERCARA.

ಕೊಡಗು

ಅಚ್ಚುಮೆಚ್ಚಿನ
ಮುದ್ರಣ ಕೆಲಸಕ್ಕೆ
"ಕೊಡಗು"
ಪ್ರೆಸ್ಸು,
ಮಡಿಕೇರಿ.

ಹೆಚ್ಚಿನ ವಿಷಯಕ್ಕೆ
ಕೂಡಲೆ ವಿಚಾರಿಸಿರಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩-೪-೦.

ಸಂಪಾದಕ—ಪಂಡ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ. ತಾ. ೨೨—೫—೧೯೩೬ [ಸಂಚಿಕೆ ೫೦

Telephone;
3145

By Appointment
To H. E The Governor of Madras.

Telegrams:
'PRECIOUS.'



V. SUBRAMANIA IYER.
Jeweller, & Diamond Merchant,
52–26 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.
Catalogue & special designs with quotations (free) on enquiry

THE CANARA BANKING CORPORATION UDIPI, LTD.,
Estd. 1906.
Head-office: UDIPI.
Branches:—(1) Udipi, (2) Coondapur, (3) Car—Street, Mangalore, (4) Shimoga, (5) Madras, (6) Bunder, Mangalore, (7) Mercara (8) Virarajendrapet
Bankers at—Important places in India.
Capital—Authorised, Issued and Subscribed Rs. 3,50,000.
Statement of steady progress in 30 years.

Year.	Capital Paid up.	Reserves.	Deposits.	Govt. Securities.	Working Capital.
1918	18,500	6,900	1,800	....	37,300
1922	85 800	16 900	2,28,400	....	3,54,000
1926	1 98,200	75,900	6,43,900	82,600	9 63 800
1930	2,25,000	1,68,700	20,23,800	3,70,400	26,36 500
1934	2,25 000	2,60 953	24 95,329	6,51,559	31,69,454
1935	2 69,795	3,18,617	27,99,323	6,77,590	35 66 706
31—3—1936	2,87 070	3 69,694	28,58 542	9 04 397	40 73,054

Banking facilities of every description.
Fixed deposits now recieved to 5%–
Savings Bank accounts-allowed at 3½%– & operation allowed by cheques.
52—27

ಜನರಲ್
ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.
(ಸ್ಥಾಪಿತವಾದದ್ದು 1907 ರಲ್ಲಿ)
ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲಿ ಕೊಡುತ್ತದೆ.
ಬೋನಸ್ಸು ಅತೀ ಹೆಚ್ಚು.
ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%೦
ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20%೦
ಪಾಲಿಸಿಯ ಶರತ್ತುಗಳು ಅತೀ ಸುಲಭ
ಎಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿವೆ.
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ಸಂಪಾದನೆಗೆ ಪೂರ್ಣ ಕಮಿಶನ್ ದೊರೆಯುವಂತಿದೆ.
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.
ಪಿ. ಜಿ. ಫಾಂಗೇವ, ಎಫ್. ಎಸ್. ಎಸ್. (ಲಂಡನ್)
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಆಫೀಸ್. ಅಥವಾ:—
ಎ. ಎಫ್ ಎಸ್ ಅಯ್ಯಂಗಾರ್.
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್, ಬಿಲ್ಡಿಂಗ್, ಚಾಮರಾಜಪೇಟೆ, 3ನೇ ರಸ್ತೆ
52—19

ವಿವಿಧ ವಾರ್ತಾವಳಿ.

ಲಾರ್ಡ್ ವಿಲ್ಲಿಂಗ್ಡನ್ನರಿಗೆ ಹೊಸ ಬಿರುದು.

ವೂರ್ವಿಸ್ ಪದವಿಗೇರಿಸಲ್ಪಟ್ಟರು.

ವೂಜಿ ವೈಸಯ್ ರಾಯರಾದ ಲಾರ್ಡ್ ವಿಲ್ಲಿಂಗ್ಡನ್ನರಿಗೆ ಬ್ರಿಟಿಷ್ ಅರಸರು ಒಂದು ಹೊಸ ಬಿರುದನ್ನು ಕೊಟ್ಟರು. ಲಾರ್ಡ್ ವಿಲ್ಲಿಂಗ್ಡನ್ನರು ಈಗ ವೂರ್ವಿಸ್ ವಿಲ್ಲಿಂಗ್ಡನ್ನರಾದರು.

—೦೦೧—

ಆಂಧ್ರ ದೇಶದಲ್ಲಿ ಶುದ್ಧಿ ಕಾರ್ಯ.

ಆಂಧ್ರ ದೇಶದಲ್ಲಿ ಶುದ್ಧೀ ಕಾರ್ಯವು ಭರದಿಂದ ಸಾಗುತ್ತಿದೆ. ಕೆಲವು ದಿವಸಗಳ ಹಿಂದೆ 65 ಮಂದಿ ಕ್ರೈಸ್ತರು ಶುದ್ಧೀಕರಿಸಲ್ಪಟ್ಟು ಆರ್ಯ ಧರ್ಮಕ್ಕೆ ಸೇರಿಸಲ್ಪಟ್ಟರೆಂದು ತಿಳಿದುಬರುತ್ತದೆ.

—೦೦೦—

ಬುದಾಪೆಸ್ಟಿನ ಪ್ರವೀಣ ಕ್ಷೌರಿಕ.

ಬುದಾಪೆಸ್ಟಿನಲ್ಲಿ ಒಬ್ಬ ಕ್ಷೌರಿಕ. ಅವನು ಪ್ರಪಂಚದ ಎಲ್ಲ ಕ್ಷೌರಿಕರಿಗಿಂತಲೂ ಅತಿ ವೇಗವಾಗಿ ಕೆಲಸ ಮಾಡಬಲ್ಲನು. ಬರೇ 28 ಸೆಕೆಂಡುಗಳಲ್ಲಿ ಸ್ವಲ್ಪವೂ ನೋವಿಲ್ಲದೆಯೂ ಅತಿ ನಾಜೂಕಾಗಿಯೂ ಒಂದು ಕ್ಷೌರವನ್ನು ಮುಗಿಸುವನು.

—೦೦೦—

ಇಂಗ್ಲೆಂಡಿನ ಉದಾರ ಭಾವ.

ಭಾರತ ಮಾತೆಯು ಇಂಗ್ಲೆಂಡಿಗೆ ಚಿನ್ನವನ್ನು ಕಳುಹಿಸುತ್ತಿರುವಳು. ಇಂಗ್ಲೆಂಡು ಅದಕ್ಕೆ ಬದಲು ಸಾಮಾನುಗಳನ್ನು ಕಳುಹಿಸುತ್ತದೆ. ಕಳೆದ ವರ್ಷ ಒಂದು ಲಕ್ಷಕ್ಕಿಂತ ಹೆಚ್ಚು ಬೈಸಿಕಲ್ಲುಗಳನ್ನು ಕಳುಹಿಸಿದೆ. ಇಂಗ್ಲೆಂಡಿನ ಉದಾರ ಭಾವವನ್ನು ಎಲ್ಲರೂ ಕೊಂಡಾಡಬೇಕಲ್ಲವೇ?

—೦೦೦—

ಆರನೆ ಸಲಕ್ಕೆ ಆರು ಮಕ್ಕಳು

ವೆಂಚಿಪ್ಪೆಗರುಳೆಂಬ ಸ್ತ್ರೀಯು ವೊದಲನೇ ಸಲ ಹೆರುವಾಗ 1, ಎರಡನೇ ಸಲ 2, ಮೂರನೇ ಸಲ 3, ನಾಲ್ಕನೇ ಸಲ 4, ಐದನೇ ಸಲ 5, ಆರನೇ ಸಲ 6 ಮಕ್ಕಳನ್ನು ಹೆತ್ತಿರುವರುವಳು. ಇನ್ನು ಏಳನೇ ಸಲಕ್ಕೆ 7 ಮಕ್ಕಳನ್ನೂ ಹಡೆದಾಳೇ?

—೦೦೦—

ಒಮ್ಮಯೇ 8 ಮಕ್ಕಳು!

ದಕ್ಷಿಣ ಚೀನಾ ದೇಶದ ಕ್ಯೂನಿಯಂಶಾ ಎಂಬಲ್ಲಿ ಓರ್ವ ಸ್ತ್ರೀಯು ಒಮ್ಮೆಯೇ 7 ಗಂಡು ಮತ್ತು ಒಂದು ಹೆಣ್ಣು ಮಗುವನ್ನು ಒಮ್ಮೆಯೇ ಹಡೆದಿರುವಳು. ಇದು ಒಳ್ಳೇ ಲಕ್ಷಣವೆಂಬ ನಂಬಿಕೆ ಇರುವುದರಿಂದ ಈ ತಾಯಿ ಅತಿ ಸಂತೋಷಗೊಂಡಿರುವಳು. ಮಕ್ಕಳೆಲ್ಲವೂ ಸೌಖ್ಯವಾಗಿರುವವು.

—೦೦೦—

ಯೋಗಾಭ್ಯಾಸದ ಪ್ರಭಾವ.

ವಿೂರತ್ತಿನ ವ್ರೊಫೆಸರ್ ಯ ಶವಾಲ್ಕರವರು ಸತ್ತು ಒದು ಕಬಲ್ಲರಂತೆ! ಕಂಣು ಕಟ್ಟಿ, ಕಾಗದದ ವೆಲೆ ಯಾವ ಭಾಷೆಯಲ್ಲಿ ಬರೆದರೂ ಅದನ್ನು ಓದಬಲ್ಲರು. ಐದು ದಿಕ್ಕುಗಳಲ್ಲಿರುವ ಐದು ವಸ್ತುಗಳನ್ನು ಐದು ಬಾಣಗಳಿಂದ ಒಂದೇ ಸಲ ಹೊಡೆಯಬಲ್ಲರಂತೆ. ಇದಕ್ಕೆ 'ಯೋಗ'ವೇ ಕಾರಣವೆಂದು ವ್ರೊಫೆಸರವರು ತಿಳಿಸಿರುವರು.

—೦೦೦—

ಸಿವಿಲ್ ಸ್ವಾತಂತ್ರ್ಯದ ಸಂಘ.

ಪಂಡಿತ ಜವಾಹರ್‌ಲಾಲ್ ನೆಹರುಗಳು ಹಿಂದೂಸ್ಥಾನದಲ್ಲಿ ಒಂದು ಸಿವಿಲ್ ಸ್ವಾತಂತ್ರ್ಯದ ಸಂಘವನ್ನು ಸ್ಥಾಪಿಸಬೇಕೆಂದು ನಿರ್ಧರಿಸಿ ಆ ಪ್ರಯತ್ನಕ್ಕೆ ಹಿಂದಿ ಧುರೀಣರ ಅಭಿಪ್ರಾಯವನ್ನು ತಿಳಿಯಲು ಹಲವರಿಗೆ ಪತ್ರ ಬರೆದಿರುವರು. ಹಲವರು ಪಂ. ಜವಾಹರ್‌ಲಾಲರಿಗೆ ಉತ್ತರ ಕೊಟ್ಟಿರುವರು. ಇನ್ನೂ ಹಲವು ಉತ್ತರಗಳು ಬರಲಿರುವವು. ಇಂಗ್ಲೆಂಡ್ ಅಮೇರಿಕಗಳಿಗೆ ಬರೆದು ಅಲ್ಲಿಯ ಸಂಘಗಳು ಹೇಗೆ ಕೆಲಸ ಮಾಡುವುದೆಂಬುದನ್ನು ತಿಳಿಯಲು ಯತ್ನಿಸುವರು. ಪಂ. ಮೋತಿಲಾಲರೇ ಮೊದಲಾದ ಹಲವು ಮಂದಿ ಧುರೀಣರು ತಮ್ಮ ಸಹಾಯವನ್ನು ಶ್ರೀ ಜವಾಹರ್‌ಲಾಲರಿಗೆ ಕೊಡುವುದಾಗಿ ತಿಳಿದ್ದಾರೆ. ಹಿಂದೂಸ್ಥಾನದ ಮುಖ್ಯ ಪಟ್ಟಣಗಳಲ್ಲಿ ಈ ಸಂಘದ ತಾತ್ಕಾಲಿಕ ಕಾರ್ಯಕಾರಿ ಮಂಡಲಿಗಳನ್ನು ಸ್ಥಾಪಿಸಿ ಕೆಲಸ ಆರಂಭಿಸಬೇಕೆಂದು ಶ್ರೀ ಜವಾಹರಲಾಲರು ಪ್ರಕಟಿಸಿದ್ದಾರೆ.

—೦೦೦—

ಬಲು ದೊಡ್ಡ ಮತ್ತು ಅತಿ ವೇಗವಾದ ವಿಮಾನ.

ಈ ವರೆಗೆ ತಯಾರಾದ ವಿಮಾನಗಳಲ್ಲಿ ಅತಿ ದೊಡ್ಡದು ಮತ್ತು ಅತಿ ವೇಗವಾಗಿ (ಘಂಟೆಗೆ 70 ಮೈಲು) ಹಾರುವ ವಿಮಾನವು ಜರ್ಮನಿಯ 'ಹಿಂಡನ್‌ಬರ್ಗ್." ಆದರೆ ಇತ್ತೀಚೆಗೆ ಜರ್ಮನಿಯವರು ಇದಕ್ಕಿಂತಲೂ ದೊಡ್ಡದಾದ ಒಂದು ವಿಮಾನವನ್ನು ತಯಾರಿಸಲುದ್ಯುಕ್ತರಾಗಿರುವರು. ಇದು ಗಂಟೆಗೆ 100 ಮೈಲುಗಳಂತೆ ಓಡಲು ಶಕ್ತಿಯುಳ್ಳದ್ದಾಗಿಯೂ. 80 ಜನರಿಗೆ ಕೂತಿತುಕೊಳ್ಳುವುದಕ್ಕೆ ಸ್ಥಳವುಳ್ಳದ್ದಾಗಿಯೂ ಇರುವುದಂತೆ.

—೦೦೦—

90 ವಯಸ್ಸಿನ ವೃದ್ಧೆ ಪ್ರಸವಿಸಿದಳು.

ಪೆರಿಸಿನ ಬಾಬೆಲ್ ಪಾಲ್ ಪೈಸ್ಟ್ ಎಂಬವಳು ತನ್ನ 90 ನೇ ವಯಸ್ಸಿನಲ್ಲಿ 7ನೇ ಮಗುವನ್ನು ಹೆತ್ತಳು. ಈ ಮಗುವನ್ನು ಹೆರುವಾಗ ಅವಳ ಹಿರಿ ಮಗನಿಗೆ 70 ಮತ್ತು ಕಿರಿಯವನಿಗೆ 60 ವರ್ಷವಾಗಿತ್ತು. ಈ ಸ್ತ್ರೀಯು ಅತ್ಯಂತ ಮುದುಕಿಯಾಗಿದ್ದರೂ ನವ ಯವ್ವನೆಯಂತಿದ್ದಳು. ವೃದ್ಧೆಯರೂ ಹೀಗೆ ಹಡೆಯುವುದಾದರೆ ಮಿತ ಸಂತತಿ ಪ್ರಚಾರಕರಿಗೆ ಕಷ್ಟ ಬಂತು.

—೦೦೦—

ಆಯರ್ಲೆಂಡಿನ ಆರ್ಥಿಕ ಸ್ಥಿತಿ.

ಖರ್ಚಿಗಿಂತ ಆಯವಿರುವುದು ಹೆಚ್ಚು

ಆಯರ್ಲೆಂಡಿನ ಆರ್ಥಿಕ ಸ್ಥಿತಿಯು ಬಹಳ ಮಟ್ಟಿಗೆ ಸುಧಾರಿಸಿದೆ. ಸರ್ಕಾರದ ಆಯವು ವೆಚ್ಚಕ್ಕಿಂತ 300 000 ಪವುನುಗಳಷ್ಟು ಹೆಚ್ಚಿದೆ. ಅರ್ಥ ಸಚಿವರಾದ ಮಿ ಮ್ಯಾಕ್ ಎಂಟೀರವರು ಪಾರ್ಲಮೆಂಟಿನಲ್ಲಿ ಒಂದು ಭಾಷಣ ಮಾಡಿ ಹೊಸ ಸಂಕವನ್ನು ಹೊರಿಸುವುದಿಲ್ಲವೆಂದೂ ಅನೇಕ ವಸ್ತುಗಳ ವೇಲಿರುವ ಪ್ರಕೃತದ ಸುಂಕವನ್ನು ಕಡಿವೆ ಮಾಡುವುದಾಗಿಯೂ ತಿಳಿಸಿದರು.

—೦೦೦—

ಓದುಗರಿಗೆ ನಿರ್ಬಂಧವೇ?

'ಡಿವೆಲರ' ಮತ್ತು 'ಕರುಣ ಬಂಗಾಳಿ' ಎಂಬ ಪುಸ್ತಕಗಳನ್ನು ಇಟ್ಟುಕೊಂಡಿದ್ದರೆಂಬ ಆಪಾದನೆಯ ವೇಲೆ ಇಬ್ಬರು ಬಂಗಾಳಿಗಳಿಗೆ ೬ ತಿಂಗಳು ಕಠಿಣ ಸಜೆ ವಿಧಿಸಿದ್ದಾರೆ. ಬ್ರಿಟಿಷರ ಆಳಿಕೆಯಲ್ಲಿ ಓದುವುದಕ್ಕೂ ಬಡಭಾರತೀಯರಿಗೆ ಸ್ವತಂತ್ರ್ಯವಿಲ್ಲವೇ? ಗುಲಾಮಗಿರಿಯನ್ನು ತಪ್ಪಿಸುವುದೇ ತಮ್ಮ ಧ್ಯೇಯವೆಂದು ಜಂಭಕೊಚ್ಚಿಕೊಳ್ಳುವ ಪಾಶ್ಚಿಮಾತ್ಯರ ಮಾತುಗಳ ಬೆಲೆ ಎಷ್ಟಿರಬಹುದು?

—೦೦೦—

ಸಾಧುಗಳ ಪತ್ರ.

ಲಖನೌ ನಗರದಿಂದ ಬಂದ ಒಂದು ವಾರ್ತೆಗನುಸಾರವಾಗಿ ಸುಮಾರು 400 ಮಂದಿ ನಗ್ನ ಸಾಧುಗಳು ಗೊಂಡಾ ಸಂಸ್ಥಾನದ ಜವಿನಾರ್ದಾರರಿಗೆ ಒಂದು ಪತ್ರವನ್ನು ಬರೆದು ಅದರಲ್ಲಿ ತಮಗೆ ಅನ್ನಹಾರ ರಕ್ಷೆ ಕೊಡಬೇಕೆಂದು ಕೇಳಿರುವರು. ಕೆಲ ಸಮಯದ ಹಿಂದೆ ಇದೇ ಕೆಲ ರೀತಿ ಕೆಲ ಸಾಧುಗಳು ಬಂದು ಆ ಊರಲ್ಲಿ ಒಹಳ ಹಾವಳಿ ಮಾಡಿದ್ದರು. ಗ್ರಾಮಸ್ಥರು ಭಯಗೊಂಡಿರುವರು.

—೦೦೦—

ಹರಿಜನರಿಗೆ ದೇವಾಲಯ ಪ್ರವೇಶ.

ಕೇರಳದಲ್ಲಿ ಜರುಗಿದ ಪರಿಷತ್ತಿನಲ್ಲಾದ ನಿರ್ಣಯಗಳು.

ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶದೊರಕಿಸಲು ತಿರುವಾಂಕೂರಿನಲ್ಲಿ ಈಗ ಚಳವಳಿಯು ಬಹಳ ಸಭೆಸಮಾರಂಭಗಳಿಂದ ನಡೆಯುತ್ತಿದೆ. ವೈಸ್ಸೆ ದಿನ ಅಲ್ಲಿ ಟ್ರಿವಾಂಡ್ರಮಿನಲ್ಲಿ ಅಖಿಲ ಕೇರಳ ಹರಿಜನ ದೇವಾಲಯ ಪ್ರವೇಶ ಪರಿಷತ್ತು ಜರಗಿತ್ತು. ಹರಿಜನರಿಗೆ ದೇವಾಲಯ ಪ್ರವೇಶ ದೊರಕಿಸಲು ಅನೇಕ ತೀರ್ಮಾನಗಳು ಮಂಜೂರಾದುವು. ಮಹಾರಾಜರೊಡನೆ ಈ ಕುರಿತು ವಿನಂತಿ ಮಾಡಿಕೊಳ್ಳಲು ನಿರ್ಧರಿಸಲಾಯಿತು.

—೦೦೦—

ಕಿವುಡರಿಗೆ ಟೆಲಿಫೋನು.

ಅವರಿಗೆ ಅನುಕೂಲವಾಗುವಂತೆ ಟೆಲಿಫೋನಿನ ಸ್ವರವನ್ನು ವೃದ್ಧಿಗೊಳಿಸುವ ವಿಧಾನವನ್ನು ಬ್ರಿಟಿಷ್ ಪೋಸ್ಟಾಫೀಸಿನ ಇಂಜನಿಯರುಗಳು ಕಂಡು ಹಿಡಿದಿರುವರು. ಒಂದು ತಾದ ಸಣ ಹೊಸ ಯಂತ್ರವನ್ನು ಟೆಲಿಫೋನಿನಲ್ಲಿ ಉಪಯೋಗಿಸಿದರೆ ಅದರಲ್ಲಿ ಸಾಧಾರಣವಾಗಿ ಕೇಳುವ ಸ್ವರವನ್ನು ಗಟ್ಟಿಯಾಗಿ ಕೇಳುವಂತೆ ಮಾಡಬಹುದು. ಇದರಿಂದ ಶುದ್ಧ ಕಿವುಡರು ಪ್ರಯೋಜನ ಹೊಂದುವುದಿಲ್ಲವಾದರೂ ಸಾಮಾನ್ಯ ಅರೆಕಿವುಡರು ಬಹಳವಾಗಿ ಪ್ರಯೋಜನ ಹೊಂದಿರುವರು.

—೦೦೦—

ಶ್ರೀ ನರಿಮೂನ್ ಸುಭಾಷ್ಚಂದ್ರರ ಭೇಟಿ.

ಮುಂಬಾಯಿ ಪ್ರಾಂತಿಕ ಕಾಂ. ಕಮಿಟಿಯ ಅಧ್ಯಕ್ಷರಾದ ಶ್ರೀ. ಕೆ ಎಫ್. ನರಿಮೇನರು ಮುಂಬಾಯಿ ಸರಕಾರದ ಅಪ್ಪಣೆಪಡೆದು, ಸರಕಾರಿ ಅಧಿಕಾರಿ ಸಂಗಡ ಎರವಾಡ ಜೈಲಿನಲ್ಲಿರುವ ಶ್ರೀ. ಬೋಸರ ಭೇಟಿಯನ್ನು ಮಾಡಿದರು. ಅಧಿಕಾರಿಗಳು, ಇವರು ಭೋಸರೊಡನೆ ಯಾವುದೂ ರಾಜಕೀಯ ವಿಚಾರಗಳನ್ನು ಕುರಿತು ಮಾತಾಡದಂತೆ ಅಡ್ಡಿ ಹಾಕಿದರು. ದಿವಂಗತ ದೇಶಬಂಧರ 'ವಿಲ್ಲನ್ನು' ಕುರಿತು ಮಾತ್ರ ನರಿಮೇನರು ಪ್ರಸ್ತಾಪಿಸಿದರು. ಶ್ರೀ. ಭೋಸರಿಗೆ ಕೆಲವು ಹಣ್ಣು ಹಂಪಲುಗಳನ್ನು ನಿತ್ಯವೂ ಒದಗಿಸುವ ಏರ್ಪಾಡನ್ನು ಮಾಡಿದರು.

—೦೦೦—

ದೇಶಸೇವಕರ ಕೆಲಸ.

ಬಿಹಾರಿನ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳಾದ ಎಂಧ್ಯುಬಾಬುಗಳ ಪ್ರಯತ್ನದಿಂದ ಬಿಹಾರಿನಲ್ಲಿ ಕಳೆದ ವರ್ಷ ಐದು ತಿಂಗಳಲ್ಲಿ ೮ ಲಕ್ಷ ಜನರು ಕುಡಿತಕ್ಕೆ ಬಹಿಷ್ಕಾರ ಹಾಕಿರುವರಂತೆ. ಪ್ರತಿಯೊಬ್ಬ ಭಾರತೀಯನೂ ಈ ಸುದ್ದಿಯಿಂದ ಸಂತೋಷಪಡುವುದಿಲ್ಲವೇ? ಹೀಗೆಯೇ ಪ್ರಯತ್ನಪಟ್ಟರೆ ಈ ದುಗ್ಗಾಣವು ಪೂರ್ತಿಯಾಗಿ ನಾಶವಾಗುವುದು. ವಿರೂಪನವು ಕಾಸ್ಮಯೆಂದೂ ಲಕ್ಷ್ಯವಿಡದೆ ಪ್ರಜೆಗಳ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಸರಕಾರವೂ ಈ ವಿಷಯದಲ್ಲಿ ದೇಶಸೇವಕರಿಗೆ ಸಹಾಯವೂಡೀಬೇ?

—೦೦೦—

ಹರಿಜನರು ತಪ್ಪು ಮಾಟ್ಟಕೂಡದ್ದು.

ಜಯಪುರ ಸಂಸ್ಥಾನದಲ್ಲಿ ಕೆಲವು ಹರಿಜನರು ಒಂದು ಹಬ್ಬವೊಡಲು ಸಿದ್ಧಪಡಿಸಿದರು. ಸಾಮಾನುಗಳು ಸೆಣಬಿನ ಹಿಂದುಗಳು ದೊಣ್ಣೆಗಳೊಂದಿಗೆ ಸುಗ್ಗಿ ಅಡಿಗೆಗೆ ತುಪ್ಪ ಉಪಯೋಗಿಸಕೂಡದೆಂದು ಆರ್ಭಟಿಸಿದರು. ಹಾಗೆ ಮಾಡಲು ಸಾಧ್ಯವಿಲ್ಲವೆಂದು ವಿನಯದಿಂದ ಹರಿಜನರು ತಿಳಿಸಿದರು ಈ ಭೂಲೋಕದ ದೇವತೆಗಳು ರೇಗಿ ಅಡಿಗೆಯನ್ನೆಲ್ಲಾ ಧ್ವಂಸಮಾಡಿ ಹರಿಜನರಿಗೆ ದಂಡಪೂಜೆಯನ್ನು ನಡಸಿ ಹಬ್ಬವನ್ನು ಮುಗಿಸಿಬಿಟ್ಟರು. ಇದಕ್ಕೆ ಹರಿಜನರು ತುಪ್ಪ ಮುಟ್ಟಕೂಡದೆಂದು ವೇದಗಳು ಘೋಷಿಸುತ್ತಿರುವುದೇ ಕಾರಣವಂತೆ!

—೦೦೦—

ಶ್ರೀ ಜವಾಹರ್‌ಲಾಲ್ ನೆಹರುಗಳವರ ಸ್ವಾಗತ ಸಿದ್ಧತೆ.

ಬೊಂಬಾಯಿ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ರಾಷ್ಟ್ರ ಸಭಾಪತಿ ಶ್ರೀ ನೆಹರುಗಳವರ ಸುದರ್ಶನ ಸವೂರಂಭಗೋಸ್ಕರ ವಿಶೇಷ ತರಹವ ಕಾರ್ಯಕ್ರಮವನ್ನು ಸಿದ್ಧಪಡಿಸಿರುವರು. ಶ್ರೀ ನೆಹರುಗಳವರು ಮುಂದಿನ ವಾರಕ್ಕೆ ಅಲ್ಲಿಗೆ ತೆರಳುವರು. ಅರು ದಿವಸಗಳ ತನಕ ಅಲ್ಲಿದ್ದು ನಂತರ ಪೂನಕ್ಕೆ ಪ್ರಯಾಣ ಬೆಳೆಯಿಸುವರು. ಅನೇಕ ಕಡೆಗಳಲ್ಲಿ ಇವರಿಗೆ ಬಿನ್ನಪಗಳನ್ನು ಅರ್ಪಿಸಲು ನಿರ್ಧಾರಗಳಾಗಿವೆ ತಾ. 21 ರಲ್ಲಿ ಪೂನಕ್ಕೆ ತೆರಳಿ ಮಹಾರಾಷ್ಟ್ರ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಭಾಗವಹಿಸುವರು. ಇಲ್ಲಿ ಮುಂದಿನ ಕಾಂಗ್ರೆಸ್ ಸ್ಥಳದ ನಿರ್ಣಯ ವಾಗುವುದು.

—೦೦೦—

ಬೆಂಗಳೂರಿನಲ್ಲಿ ಮಹಾತ್ಮ ಗಾಂಧಿಯವರು.

ಆರೋಗ್ಯವು ನೆಟ್ಟಗಿದೆ.

ಮಹಾತ್ಮಜೀಯವರು ತಮ್ಮ ಪತ್ನಿಯವರೊಡನೆ ಮದ್ರಾಸು ಮೈಲಿನಲ್ಲಿ ಪ್ರಯಾಣ ಬೆಳೆಸಿ, ಬೆಂಗಳೂರಿನಲ್ಲಿ ಇಳಿದರು. ಜನಸ್ತೋಮವು ಇವರ ದರ್ಶನ ಮಾಡಲು ಕಿಕ್ಕಿರಿದು ನೆರೆದಿತ್ತು. ಸರದಾರ್ ಪಟೇಲರು, ಮಹದೇವ ದೇಶಾಯಿಗಳು; ಶ್ರೀಮತಿ ಮಣಿಬೆನ್ ಪಟೇಲರು ಬೊಂಬಾಯಿಯಿಂದ ಇವರನ್ನು ಸೇರಲು ಇಲ್ಲಿಗೆ ಬಂದಿದ್ದರು. ಬೆಂಗಳೂರಿನ ಕುವರ ಪಾರ್ಕಿನಲ್ಲಿ ಒಂದು ತಾಸು ವಿಶ್ರಾಂತಿ ಪಡೆದು ನಂತರ ನಂದಿಬೆಟ್ಟಗಳಿಗೆ ಪ್ರಯಾಣ ಬೆಳೆಸಿದರು. ಮಹಾತ್ಮಜೀಯವರ ಆರೋಗ್ಯವು ನೆಟ್ಟಗಿದ್ದು ಅವರು ಸಂತೋಷಚಿತ್ತರಾಗಿದ್ದರು. ಮೈಸೂರಿನ ದಿವಾನರು ಮಹಾತ್ಮಜೀಯವರ ಭೇಟಿ ಮಾಡಿದರು.

—೦೦೦—

ನಿರುದ್ಯೋಗದ ಸಮಸ್ಯೆ.

'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಶ್ರೀಮಾನ್ ಯಂ. ಬಿ. ನರ್ಸಪ್ಪನವರು ಬರೆದ ಲೇಖನದ ಉಲ್ಲೇಖ
ಈ ಲೇಖನವು ವಿಚಾರಪರವಾಗಿದ್ದು ಇಂದಿನ ಸಮಸ್ಯೆಯ ನಿಜವಾದ ಕಾರಣವನ್ನು
ವ್ಯಕ್ತಗೊಳಿಸುವದಾಗಿದೆ.

ಅಮೇರಿಕ, ಜರ್ಮನಿ ಮತ್ತು ಇಂಗ್ಲೆಂಡು ಇತ್ಯಾದಿ ದೇಶದ ನಿರುದ್ಯೋಗಿಗಳ ಸಂಖ್ಯೆಗಳು ನಮಗೆ ಆಗಾಗ್ಗೆ ದೊರಕುತ್ತದಾದರೂ ನಮ್ಮ ವಿಶಾಲ ಭಾರತದಲೆಷ್ಟು ನಿರುದ್ಯೋಗಿಗಳಿದ್ದಾರೆಂದು ತಿಳಿಯದಾಗಿದೆ. ಕಾರಣವೇನು? ಅವುಗಳೆಲ್ಲಾ ಸ್ವತಂತ್ರ ದೇಶಗಳು. ತಮ್ಮ ದೇಶದಲ್ಲಾಗುವ ಪ್ರತೀ ಒಂದು ವಿದ್ಯಮಾನಗಳು ಪ್ರತೀ ಒಬ್ಬ ಪ್ರಜೆಗೆ ಅವಶ್ಯವಿರುವ ಸ್ಥಿತಿಯಲ್ಲಿರುತ್ತವೆ. ಅಸಂಖ್ಯಾತವಾದ ನಮ್ಮ ದೇಶದ ನಿರುದ್ಯೋಗಿಗಳ ಸಂಖ್ಯೆಗಳು ಗೊತ್ತಾದ್ದರೇ ಅದರ ಅದು ಬಾಕಿ ದೇಶಗಳ ಎಲ್ಲಾ ನಿರುದ್ಯೋಗಿಗಳ ಸಂಖ್ಯೆಗಳಿಗಿಂತ ಅಧಿಕವಾಗಬಹುದು. ಭಾರತ ಮೊತ್ತದ ಅಂಥಾ ನಿರುದ್ಯೋಗಿಗಳ ಸಂಖ್ಯೆಯನ್ನು ಪರದೇಶಿಗಳಿಗ್ಯಾಕೆ ತಿಳಿಸಬೇಕೆಂಬ ಅಭಿಪ್ರಾಯದಿಂದಿರಬಹುದು.. ಅಲ್ಲದೆ ವಿದೇಶಗಳಿಗೆ ಸದಾ ಅನ್ನ ಕೊಡುತ್ತಿರುವ ಭಾರತ ಮಾತೆಯು ತನ್ನ ಮಕ್ಕಳಿಗೆಲ್ಲಾ ಅನ್ನ ವಿಲ್ಲವೆಂದು ಹೇಳಿಸಿಕೊಳ್ಳುವುದಾದರೂ ಹೇಗೆ? ಅಲ್ಪ ಸ್ವಲ್ಪ ದೇಶಧ್ಯೇಯರುಗಳಿಂದ ನಮ್ಮ ದೇಶದ ನಿರುದ್ಯೋಗಿಗಳ ಸಂಖ್ಯೆಯ ತಿಳಿದಿರುವುದಾದರೂ ಅವು ಅಪೂರ್ಣವಾಗಿರುವುದೆಂದು ಹೇಳಬಹುದು.

ನಿಜವಾದ ಸಂಗತಿಗಳಿಂದ ತಿಳಿದು ಬರುವಂತೆ ಒಂದು ಶತಮಾನದ ಕೆಳಗೂ ನಮ್ಮ ದೇಶದಿಂದ ವಿದೇಶಗಳಿಗೆ ನಮ್ಮ ಪ್ರತಿಯೊಂದು ಕೈಗಾರಿಕೆ ಸಾಮಾನುಗಳು ರಫ್ತಾಗುತ್ತಿದ್ದವು ಆ ಕಾಲದಲ್ಲಿ ಈಗ ತಲೆ ಎತ್ತಿ ನಿಂತಿರುವ ಜಪಾನು, ಜರ್ಮನಿ, ಅಮೇರಿಕ ಇಂಗ್ಲೆಂಡು ಇತ್ಯಾದಿ ದೇಶಗಳು ಅನಾಗರಿಕ ಸ್ಥಿತಿಯಲ್ಲಿದ್ದು ಪ್ರತೀ ಒಂದು ಸಾಮಾನುಗಳನ್ನು ನಮ್ಮ ದೇಶದಿಂದ ತರಿಸಿಕೊಳ್ಳುತ್ತಿದ್ದವು. ವ್ಯಾಪಾರವು ಒಹಳವಾಗಿ ನಡೆಯುತ್ತಿದ್ದು ಒಳ್ಳೆ ಸಂಪತ್ತು, ಸಮೃದ್ಧಿಯೂ ಆಗಿತ್ತು. ಆಗ ನಮ್ಮ ಭಾರತವು ಸುವರ್ಣಭೂಮಿ ಎಂದು ಹೆಸರಾಂಗೊಂಡಿತು. ಅಂಥಾ ಸುವರ್ಣಭೂಮಿಯು ಈಗ ಯಾವ ಸ್ಥಿತಿಯಲ್ಲಿದೆ? ಅಗಿನ ಧನಾಢ್ಯರೂ ಒಲಾಢ್ಯರೂ ಎಲ್ಲಿ? ಈಗಿನ ನಾಮಾಂಕಿತ ಧನಾಢ್ಯರೂ, ನಿಸ್ಪೇಜರೂ, ಗುಲಾಮರೂ ಎಲ್ಲಿ? ಅಜ, ಗಜಾಂತರವಾಗಿರುತ್ತದೆ. ಸುವರ್ಣ ಭೂಮಿಯು ಸುವರ್ಣವನ್ನು ಹರಿಸುತ್ತಲೇ ಇದೆ.

ಕೃಷೀಣ ವಿದೇಶೀಯರು ನಮ್ಮ ಕೈಗಾರಿಕೆಗಳಲ್ಲಿ ಒಂದೊಂದನ್ನೇ ಕಲಿತು ಒಹು ಬೇಗನೇ ಉತ್ತಮ ಸ್ಥಿತಿಗೆ ಒಂದು ಅವರ ದೇಶಗಳು ಇತ್ತೀಚೆಗೆ ತಲೆ ಎತ್ತಿ ನಿಂತಿವೆ ಆ ಪೈಕಿ ಜಪಾನೂ, ಜರ್ಮನಿಯೂ ಮುಖ್ಯವಾಗಿವೆ. ವಿದೇಶೀಯರ ಪೈಪೋಟಿಯಿಂದಲೂ, ಅವರವರ ಸ್ವದೇಶ ಪ್ರೇಮದಿಂದಲೂ ನಮ್ಮ ಕೈಗಾರಿಕೆಗಳು ಒಂದೊಂದೇ ಬಿದ್ದುಹೋಗಿ ಈಗೀಗ ನಾಮಾವಶೇಷವಾಗಿ ಹೋಗಿವೆಯಲ್ಲದೆ ಸಂಪೂರ್ಣ ಪರದೇಶಿ ವಸ್ತುಗಳನ್ನೇ ಹೊಂದುವ ಸ್ಥಿತಿಯಲ್ಲಿದ್ದೇವೆ ಅಲ್ಲದೆ, ಪಂದೇಶಿ ವಸ್ತುಗಳಲ್ಲದಿದ್ದರೆ ನಮ್ಮ ಯಾವ ಕೆಲಸಗಳೂ ನಡೆಯದ ಸ್ಥಿತಿಯಲ್ಲಿದ್ದೇವೆ. ಮೂವತ್ತೈದು ಕೋಟಿ ಜನಸಂಖ್ಯೆಯನ್ನು ಹೊತ್ತಿರುವ ಈ ವಿಶಾಲಭಾರತವು ಪರದೇಶಿಯರ ಸಾಮಾನುಗಳನ್ನು ಪಡೆಯುವುದಾದರೆ ನಮ್ಮ ಉದ್ಯೋಗವೆಲ್ಲಿ ಉಳಿಯಿತು? ಅಲ್ಲದೆ ವಿದೇಶಿಯರು ಉದ್ಯೋಗಹೊಂದಿ ವೆರೆಯವ್ವೀನಾಶ್ಚರ್ಯ? ಈ ದೆಶೆಯಿಂದ ನಿರುದ್ಯೋಗವು ನಮ್ಮ ದೇಶದಲ್ಲಿ ಹೆಚ್ಚಾಗುತ್ತಾ ಬಂದು ಈಗೀಗ ಪರಮಾವಧಿಗೆ ಒಂದಿರುತ್ತದೆ. ಇದಕ್ಕೆ ನಮ್ಮವರ ಅಷ್ಟಿಯೂ, ಕೂತುಂಬ ಸ್ಥಿತಿಯೂ, ಸೋಮಾರಿತನವೂ. ಮುಖ್ಯ ಕಾರಣವೆಂದು ಹೇಳಬಹುದು. ಭಾರತದ ನಿರುದ್ಯೋಗದ ಸ್ಥಿತಿಗೆ ಭಾರತೀಯರನ್ನೇ ಯಾಕೆ ಕಾರಣರೆಂದು ಹೇಳಬಾರದು?

ಒಡ ಭಾರತದಲ್ಲಿ ಹೊಟ್ಟೆಗಿಲ್ಲದೆ ಸಾವಿರಾರು ಜನರು ಸಾಯುತ್ತಿರುವರಾದರೂ ಅವರಲ್ಲನೇಕರು ಹೊಟ್ಟೆಗೆ ಬೇಕಾದುದಕ್ಕಿಂತ ಅಧಿಕವಾಗಿ ತಿಂದು ಸಾಯುವವರೂ ಇದ್ದಾರೆ ಅದೇ ರೀತಿ ಸಂತೋಷದಿಂದ ಸಾಗಿಸುವ ಒಂದು ಕೆಲಸವಿರುವಾಗ ಹೆಚ್ಚಿನ ಮಹನೀಯರು ಜೊತೆಗೆ ಇನ್ನೂ ಅನೇಕ ತತ್ತದ ಉದ್ಯೋಗಗಳನ್ನು ವಹಿಸಿಕೊಳ್ಳುತ್ತಾರೆ. ಅಂದರೆ ಹಣಗಳಿಸಬೇಕೆಂಬ ಉದ್ದೇಶವೂ, ತಾನೊಬ್ಬ ಆಢ್ಯ ಮನುಷ್ಯನೆನಿಸಿಕೊಂಡಿರಬೇಕಂಬ ಕಾಂಕ್ಷೆಯೂ ಇರುತ್ತದೆ. ಇದರಿಂದ ಅನೇಕ ನಿರುದ್ಯೋಗಿಗಳು ತಲೆ ಎತ್ತುತ್ತಾರೆ. ಉದ್ಯೋಗ ಹೊಂದಿರುವ ಶ್ರೀಮಂತರು ನಾಜೂಕಾದ ವಿದೇಶಿ ವಸ್ತುಗಳನ್ನು ಹೊಂದಿ. ಅವುಗಳಲ್ಲೇ ತಲ್ಲೀನರಾಗುವರು. ಈಗಿನ ವ್ಯವಹಾರವೇ ವಿದೇಶೀ ಸ್ಥಿತಿಯಲ್ಲಿರುವುದರಿಂದ ಪರದೇಶೀ ಪೋಷಕಿನಲ್ಲೇ ಇದ್ದು ಪಂದೇಶಿಯರೆಂದನ್ನುವ ಉವೇದ್ವಾರಗಳಾಗಿರುತ್ತಾರೆ. ಹೆಚ್ಚಿನ ಹಣವನ್ನು ಪರದೇಶೀ ವ್ಯವಸಾಯದಲ್ಲಿಯೂ, ವಿಲಾಸಗಳಲ್ಲಿಯೂ ಸುರಿಸಿ ವಿದೇಶೀಯ ಬೊಕ್ಕಸವನ್ನು ತುಂಬಿಸುತ್ತಾರೆ. ಪಾಶ್ಚಿಮಾತ್ಯರ ನಕಲಿಯನ್ನು ಹೊಂದುತ್ತಿದ್ದಾರೆ. ಅಂದರೆ ಪಾಶ್ಚಿಮಾತ್ಯರೇ ಉತ್ತಮರೆಂಬ ಸ್ಥಿತಿಯಿರುವುದರಿಂದ ತಾವು ಜನರ ಆದರ ಸತ್ಕಾರಗಳಿಗೆ ಯೋಗ್ಯರೆಂದೆನ್ನಿಸಿಕೊಳ್ಳುವರು. ಅದರೆ ಹಣವೇ ಈ ರೀತಿ ಮಾಡುವುದೆಂದು ತಿಳಿಯಲಾಗದು. ಇದು ಭಾರತೀಯರಿಗೆ ಭೂಷಣವೆ? ಎಲ್ಲರೂ ಅನೇ ಸ್ಥಿತಿಯಲ್ಲಿರಲು ಸಾಧ್ಯವೇ? ಅಂತಹ ಸ್ಥಿತಿಯು ಈಗಿತ್ತಿಗೆ ಬಂದಿದೆಯೇ ಎಂಬುದನ್ನು ನೋಡಿಕೊಳ್ಳುವುದಿಲ್ಲ. ಇದರಿಂದ ಮತ್ತೂ ನಮ್ಮ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಜಾಸ್ತಿಯಾಗಲು ಕಾರಣವಾಯಿತು.

ಇನ್ನೂ ಅನೇಕ ಸಂಭಾವಿತರು ತಮ್ಮ ಅಷ್ಟೈಶ್ವರ್ಯದ ಉದ್ಯೋಗದ ಶಕ್ತಿ ಪ್ರದರ್ಶನದಿಂದ ತಮ್ಮ ಮಕ್ಕಳು, ನೆಂಟರಿಷ್ಟರಿಗು ಇವರುಗಳಿಗೆನೇ ಉದ್ಯೋಗ ದೊರಕಿಸಿ ಕೊಡುವರು. ಇದರಿಂದ ತಮ್ಮ ಕುಟುಂಬ ವರ್ಗವಲ್ಲದೆ ಸ್ವಸಮಾಜವೇ ಐಶ್ವರ್ಯವಂತವಾದ್ದಾಗುತ್ತದೆ. ಒಂದೊಂದು ದೊಡ್ಡ ಕುಟುಂಬವನ್ನು ಸರ್ವ ವಿಲಾಸಗಳಿಂದ ನಡೆಸುವ ಉದ್ಯೋಗವು ಒಬ್ಬ ರಿಗಿರುವುದಾದರೂ ಪ್ರತೀ ಒಬ್ಬ ಮೆಂಬರಿಗೆ ಉದ್ಯೋಗ ದೊರಕಿಸಿಕೊಟ್ಟರೆ ಅವರ ಶ್ರೀಮಂತನದ ತಲೆನೆ ಎಷ್ಟರ ವರೆಗಾಗುತ್ತದೆಂದು ಊಹಿಸಬಹುದು. ಇದರಿಂದ ಒಡ ಜನಾಂಗವು ಅದರೆ ಹೊಟ್ಟೆ ಪಾಡಿಗಾಗಿ ಕೆಲಸವೂ ಸುಖಾಂಗಕ್ಕೆ ಕೆಲಸ ದೊರೆಯಲಾರದು. ಆದುದರಿಂದ ಒಡ ಜನಾಂಗವು ಉದ್ಯೋಗರಹಿತ ಸ್ಥಿತಿಯಲ್ಲಿದ್ದ ಅರನ್ನು ಸಂಬಿಕೊಂಡ ಅಸಂಖ್ಯಾತ ಒಡ ಸಂಸಾರಗಳು ಉಪವಾಸವಿಂಬೇಕಾಗುತ್ತದೆ ಶ್ರೀಮಂತರು ಜನಾಂಗವೇ ಸರಕಾರವನ್ನು ನಡೆಸುತ್ತಿರುವುದರಿಂದ ಸರಕಾರದ ಸಹಾಯವೂ ಅವರ ಕೈಯ್ಯಲ್ಲೇ ಬರುವುದು ಹೆಚ್ಚಲ್ಲ

ಇನ್ನು ಅನುಕೂಲವುಳ್ಳ ಶ್ರೀಮಂತರು ವ್ಯವಸಾಯ, ಕೈಗಾರಿಕೆಗಳಿಗಾಗಿ ಹಣವನ್ನು ವಿನಿಯೋಗಪಡಿಸಿ ಕೃಷೀಣ ತಮ್ಮ ಮೂಲಧನವನ್ನೂ, ಕಿಂಚಿತ್ ಲಾಭವನ್ನೂ ಪಡೆಯಬಹುದು. ಅದರೆ ಅವರಿಗೆ ಅದೆಲ್ಲಿ ಧಾರಾಳಬುದ್ಧಿಯು ಉತ್ಪನ್ನವಾಗಬೇಕು? ಶೀಘ್ರಸಮಯದಲ್ಲಿ ದುಬಾರಿ ಲಾಭ ಹೊಂದುವ ಮಿಲ್ಲು ಬ್ಯಾಂಕ್, ವಿದೇಶೀ ಸಾಮಾನುಗಳ ಏಜನ್ಸಿ ಇವುಗಳಿಗೇ ಹಣವು ಸುರಿದು ಒಂದಕ್ಕೆರಡು ಲಾಭಪಡೆವರು. ಸೂಕ್ಷ್ಮ ರೀತಿ ವಿಚಾರಿಸಿದರೆ ಇದೆಲ್ಲಾ ಪರದೇಶಿಯರ ಪ್ರಯೋಜನಕ್ಕೆ ಅನುಕೂಲವೇ ಹೊರತು, ಒಡ ಜನಾಂಗವಾದ ಭಾರತೀಯರಿಗೆ ಇದರಿಂದ ಏನೂ ಪ್ರಯೋಜನವಿರಲಾರದು. ಜನಸಾಮಾನ್ಯರ ಪ್ರಯೋಜನವನ್ನು ನೋಡಿಕೊಳ್ಳುವ ಶ್ರೀಮಂತರು ಬೆರಳೆಣಿಕೆಗೆ ದೊರಕುವರೋ ಇಲ್ಲವೊ ಎಂದು ಹೇಳಲಸಾಧ್ಯವಿರುತ್ತದೆ. ಹೆಚ್ಚಿನ ಶೀಘ್ರ ಲಾಭ ಪಡೆಯುವ ಅಭಿಲಾಷೆಯಿಂದ ಶ್ರೀಮಂತರ ಹಣವು ವಿದೇಶೀ ಸಾಲುಭಂಡವಾಳದಲ್ಲಿರುವುದರಿಂದ ಅದರ ಹೆಚ್ಚಿನ ಲಾಭವು ವಿದೇಶೀಯರಿಗೆ ದೊರೆತು ಅಲ್ಲಿ ಅವರಿಗೆ ಉದ್ಯೋಗಕ್ಕೆ ಅನುಕೂಲವಾಗಿ ಆ ಹೇತುವಿನಿಂದ ನಮ್ಮಲ್ಲಿ ಮತ್ತೂ ಹೆಚ್ಚಿನ ನಿರುದ್ಯೋಗಕ್ಕೆ ಕಾರಣವಾಯಿತು ಅಲ್ಲದೆ ಇನ್ನೂ ಕಾರಣವಾಗುತ್ತಲೇ ಇದೆ ಇವು ಎಂದಿಗೆ ಸಧಾರಣೆ ಸ್ಥಿತಿಗೆ ಬರುವುದು?

ಮಿಲ್ಲುಗಳ ವಿಚಾರವಾದರೋ ಪ್ರತ್ಯೇಕವಾಗಿರುತ್ತವೆ ಅವುಗಳಲ್ಲಿ ಸಾವಿರಗಟ್ಟಿ ಜನರಿಗೆ ಉದ್ಯೋಗ ದೊರಕುವುದಾದರೂ ಅಂಥಾ ಸಾವಿರಾರು ಜನರ ಕೆಲಸಗಳು ಹಳ್ಳಿಮೂಲೆಗಳಲ್ಲಿರುವ ಲಕ್ಷಾಂತರ ಜನರನ್ನು ನಿರುದ್ಯೋಗ ಸ್ಥಿತಿಯಲ್ಲಿರಿಸದು ಶ್ರೀಮಂತರ ಸ್ವಭಾವದಂತೆ ಮಿಲ್ಲುಗಳಲ್ಲಿ ಕೆಲಸ ಮಾಡುವ ಕೂಲಿಗಳಿಗೆ ಸರಿಯಾದ ಮಜೂರಿ ಸಿಕ್ಕದೆ ಹಲವು ಸಲ ಮೂಲೀಕರಿಗೂ, ಕೂಲಿಗಳಿಗೂ ವೈಮನಸ್ಯಗಳುಂಟಾಗುವ ಸ್ಥಿತಿಗಳೂ ಬರುತ್ತವೆ. ಅದ್ದರಿಂದ ಕೂಲಿಗಳು ಮಾಡುವ ಪ್ರತೀ ಒಂದು ರೂಪಾಯಿಯು ಕೆಲಸವು ಯಜಮಾನನಿಗೆ ಎಷ್ಟಾಣೆಯಲ್ಲಿ ಸಿಕ್ಕುವಂತಿದೆ. ಯಜಮಾನನ ಬೊಕ್ಕಸವು ಇದರಿಂದ ಬಹು ಬೇಗನೇ ತುಂಬುತ್ತದೆ. ಮಿಲ್ಲುಗಳ ಕೂಲಿಯು ದಿನವೊಂದಕ್ಕೆ 8 ಯೂ 10 ಆಣೆ ಹೊಂದುವವನಾದರೂ ಅವನ ಹಿಂದುಗಡೆ ನಾಲ್ಕೈದು ಜನರ ಕುಟುಂಬವನ್ನು ಪೋಷಿಸುವ ಭಾರವನ್ನು ಹೊತ್ತಿರುತ್ತಾನೆ. ಅವನೊಬ್ಬನ ಹೊಟ್ಟೆಗೆ ಸಾಕಾಗಬಹುದಾದರೂ ಬಾಕಿಯವನ ಹೊಟ್ಟೆ, ಕಣಿಸುವ ಸ್ಥಿತಿಯಲ್ಲಿರಬಾರದು. ಇದರಿಂದ ನೌಕರಿ ಇದ್ದು ಪ್ರಯೋಜನವೇನು?

ಪೈಪೋಟಿಗಳಿಂದ ಮಿಲ್ಲುಗಳ ಮೂಲಿಕರು ಕೋಟಿಗಟ್ಟಿ ಹಣವನ್ನು ಕಳಕೊಳ್ಳುವರಾದರೂ ಕಷ್ಟಪಟ್ಟು ದುಡಿಯುವ ಕೂಲಿಗಳಿಗೆ ಸರಿಯಾದ ಮಜೂರಿಯನ್ನು ಕೊಡುವುದಿಲ್ಲ. ಅಲ್ಲದೆ 2, 3 ಜನರು ಮಾಡುವ ಕೆಲಸವನ್ನು ಹೆಚ್ಚು ಸಮಯದಲ್ಲಿ ಒಬ್ಬನಿಂದಲೇ ಮಾಡಿಸಿ ಅದರಲ್ಲೂ ಕತ್ತರಿ ಪ್ರಯೋಗ ಮಾಡುತ್ತಾರೆ. ಹೊಟ್ಟೆಪಾಡಿಗಾಗಿ ಕೆಲಸ ಮಾಡುವ ಕೂಲಿಗಳು ಅದನ್ನು ಸಹಿಸಿಕೊಳ್ಳದೆ ಉಪಾಯವಿರುವದಿಲ್ಲ ಹೀಗಿದೆ ಈಗಿನ ಪ್ರಪಂಚ ಸ್ಥಿತಿಗಳು.

ಮಿಲ್ಲುಗಳ ದೆಸೆಯಿಂದ ಈ ರೀತಿ ಕತ್ತರಿ ಪ್ರಯೋಗಗಳು ನಡೆಯುತ್ತಿವೆ ಮಾತ್ರವಲ್ಲದೆ ಹಳ್ಳಿಗಳಲ್ಲಿರುವ ಕೈಮಗ್ಗಗಳು ನಾಮಾವಶೇಷನಾಗುತ್ತಾ ಬರುತ್ತಿವೆ. ಮಿಲ್ಲು ವಸ್ತ್ರಗಳ ಪೈಪೋಟಿನಿಂದ ಊರ ಕೈವಸ್ತ್ರಗಳ ವಸ್ತ್ರಗಳು ಗಿರಾಕಿಗಳಿಗೆ ಬೇಡವಾಗಿವೆ. ಅಂದರೆ ಅಗ್ಗವಾದದ್ದು ಯಾವದಂಟು ಎಂಬುದನ್ನು ನೋಡಿಕೊಳ್ಳುತ್ತಾರಲ್ಲದೆ ಅದರಿಂದ ಎಷ್ಟರ ಮಟ್ಟಿಗೆ ನಷ್ಟವುಂಟೆಂಬದನ್ನು ನೋಡಿಕೊಳ್ಳುವದಿಲ್ಲ. ಮಿಲ್ಲುಗಳ ದೆಸೆಗಳಿಂದ ಸಾವಿರಾರು ಕೈಮಗ್ಗಗಳೇ ನಾಶವಾಗಿ ಆ ವುಗಳಲ್ಲಿ ಕೆಲಸ ಮಾಡುವ ಲಕ್ಷಗಟ್ಟಿ ಜನರು ನಿರುದ್ಯೋಗಿಗಳಾಗಿರುವರು. ಈ ಸ್ಥಿತಿಗಳನ್ನು ತಿಳಿದೂ ತಿಳಿಯದಂತೆ ವರ್ತಿಸುವ ಈಗಿನ ಅಧಿಕ ಮನುಷ್ಯರಿಗೆ ಏನನ್ನ ಬೇಕೋ ತಿಳಿಯುದು. ಇದರಿಂದ ಹಣವಾತರೋ ಚಿನ್ನದ ರೂಪದಿಂದ ಸ್ವಲ್ಪ ದಿನ ವಿದೇಶಗಳಿಗೆ ಸಾಗುತ್ತಲೇ ಇರುತ್ತದೆ. ಇವು ನಮ್ಮ ದೇಶದಲ್ಲೇ ನಿಲ್ಲುವ ಕಾಲವು ಎಂದಿಗೆ ಬರುತ್ತದೆ?

ಪರದಾಸ್ಯದ ತವರು ಮನೆಯಾಗಿರುವ ನಮ್ಮ ಭಾರತದಲ್ಲಿ ಯಾವದೊಂದು ಸ್ವತಂತ್ರತೆಯು ಉದ್ಯೋಗವನ್ನು ಮಾಡಲು ಎಡೆಯಿಲ್ಲ ಮಾಡಿದರೂ ಪ್ರೋತ್ಸಾಹ ದೊರಕವುಲ. ಖಾದಿ ಸಾಮಾನು, ಬೆಂಕಿ ಪೆಟ್ಟಿಗೆ ಇತ್ಯಾದಿಗಳು ನಮ್ಮ ಬಡ ಸಂತಾನಗಳಿಂದ ಮಾಡಲ್ಪಡುವದಾದರೂ ಅವಕ್ಕೆ ಅಳವಡಿಸಿರುವ ಪ್ರೋತ್ಸಾಹವಿರುವುದಿಲ್ಲ ಅಲ್ಲದೇ ಸಾಮಾನು ಮುಟ್ಟು ಬೆಂಕಿ ಪೆಟ್ಟಿಗೆಗಳಿಗೆ ಹೆಚ್ಚಿನ ತೆರಿಗೆ ಹೊಂಚಿಸುವುದರಿಂದ ಅವು ಕೃಷೀಣ ಕಮ್ಮಿಯಾಗುತ್ತಲೇ ಬರುತ್ತಿವೆ. ಖಾದಿಯೇನೊ ಅಲ್ಪ ಸ್ವಲ್ಪ ಸಧಾರಿಸುವುದಾದರೂ ನಮ್ಮವರು ಪ್ರೋತ್ಸಾಹವೇ ದಿನ ದಿನ ಹೋದಷ್ಟಕ್ಕೆ ಕಮ್ಮಿಯಾಗುತ್ತಾ ಬರುತ್ತಿದೆ. ಸೊದಲು ಖಾದಿಯನ್ನು ಧರಿಸುತ್ತಿದ್ದವರು ಈಗೀಗ ಬಿಡತಾ ಬರುವುದಲ್ಲದೆ ಬಾಕಿಯವರನ್ನು ಧರಿಸದಂತೆ ಮಾಡುವರು. ಅಲ್ಲದೆ ಹತಾಶಕಿಕೆಳ್ಳುವವರಿಗೆ ಕಾಜೆಷ್ಟೆ ಕೂಡ ಮಾಡಲು ಹೇಸುವುದಿಲ್ಲ. ಹೀಗಾದರೆ ನಮ್ಮ ಏಳಿಗೆಯಾಗುವುದು ಎಂದು?

ಎಷ್ಟೋ ಒಡ ಸಂಸಾರಗಳು ನಿರುದ್ಯೋಗದಿಂದ ಪರಿತಪಿಸುವುದನ್ನು ಕಂಡು ಮಹಾತ್ಮಜೀಯವರು ಒಬ್ಬೊಬ್ಬರಿಗೆ ಒಂದೊಂದು ಹಿತ ಅನ್ನವನ್ನಾದರೂ ಕೊಡುವ ಎಂದು ಅಖಿಲ ಭಾರತ ಚರಕ ಸಂಘವೆಂದು ಮಾಡಿ ಅದರ ಮುಖಾಂತರ ಸಾವಿರಾರು ಜನರಿಗೆ ಒಂದೊಂದು ಹೊತ್ತು ಉಟ ಮಾಡಲು ಬಾಕಿ ಅನುಕೂಲವಿರುವ ಭಾರತೀಯರಾದ ನಾವು ಅವರು ತೆಗೆದುಕೊಟ್ಟು ಮಾಡುವ ಖಾದಿಯನ್ನು ಧರಿಸಿದರೆ ಮಾತ್ರ ಸಾಧ್ಯವಾಗುವುದು ಹಾಗೆ ನಾವು ಖಾದಿಯನ್ನು ಸಲ್ಪ ಹಣ ಜಾಸ್ತಿ ಕೊಟ್ಟಾದರೂ ಪಡೆದರೆ, ಎಷ್ಟೋ ನಿರುದ್ಯೋಗಿಗಳಿಗೆ ಕೆಲಸ ಕೊಟ್ಟಂತಾಗುವುದು. ಮಾತ್ರವಲ್ಲ ಅವರಿಗೆ ಸಿಕ್ಕುವ ಪ್ರತೀ ಒಂದು ತುತ್ತು ಅನ್ನವು ನಾವು ಕೊಟ್ಟ ದಾನಧರ್ಮವಾಗುವುದು. ಅದುದರಿಂದ ಇನ್ನಾದರೂ ಖಾದಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕುವುದೆಂದು ಆಶಿಸಬಹುದೇ? ಅಭಿಮಾನವಿರುವ ಪ್ರತೀ ಒಬ್ಬ ಭಾರತೀಯನಿಗೆ ಖಾದಿ ಧರಿಸುವುದು ಭೂಷಣವಲ್ಲವೇ? ಅದೊಂದು ಸ್ವತಂತ್ರತೆಯ ಚಿಹ್ನೆಯಲ್ಲವೇ?

ನಿರುದ್ಯೋಗ ಸಮಸ್ಯೆಯನ್ನು ಯಾವ ರೀತಿಯಲ್ಲಾದರೂ ಬಗೆಹರಿಸಬೇಕಾದರೆ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕದೆ ಸಾಧ್ಯವಾಗಲಾರದು. ಸ್ವಾತಂತ್ರ್ಯ ಸಿಕ್ಕಿದರೂ ಒಂದೇ ಸಲ ನಿರುದ್ಯೋಗ ಸಮಸ್ಯೆಯ ಬಗೆ ಹರಿಯಲಾರದು. ಸ್ವದೇಶ ಪ್ರೇಮ, ಸ್ವದೇಶಿ ವಸ್ತುಗಳ ಪ್ರೋತ್ಸಾಹ ಸಂಘಟಣೆ ಇವು ವೃದ್ಧಿ ಹೊಂದಿದಂತೆ ಕೃಷೀಣ ಸುಲಭವಾಗಬಹುದು. ಸ್ವಾರ್ಥತ್ಯಾಗೀ ಧುರೀಣರು ಮುಂದಕ್ಕೆ ಬರಬೇಕು. ಶ್ರೀಮಂತ ಜನಾಂಗದ ಹಣಕ್ಕೆ ಭದ್ರತೆ ದೊರಕಬೇಕು. ಅಂಥಾ ಹಣವು ದೇಶದಲ್ಲೇ ವಿನಿಯೋಗವಾಗಬೇಕು. ವಿವಿಧ ಕೋಮುಗಳಿಂದ ತುಂಬಿರುವ ಭಾರತದ ಧುರೀಣರು ಪರಸ್ಪರ ಅನ್ಯೋನ್ಯರಾಗಬೇಕು. ಒಂದೇ ಅಭಿಪ್ರಾಯವು ನೆಲೆನಿಲ್ಲಬೇಕು. ಕೈಗಾರಿಕೆ, ವ್ಯಾಪಾರ, ವ್ಯವಸಾಯ ಇವೆಲ್ಲಾ ಸ್ವದೇಶದ್ದೇ ಆಗಿದ್ದು ಜನರಿಗೆ ಅವುಗಳಲ್ಲಿ ಆಕರ್ಷಣವಿರಬೇಕು. ಒಡವಜಲ್ಲವರಿಗೆ ಸರಿಸಮಾನ ಹಕ್ಕಿರಬೇಕು. ವಿದ್ಯಾ ಪ್ರಚಾರವಾಗಬೇಕು. ಗಂಡಸರಿಗೂ, ಹೆಂಗಸರಿಗೂ ಬೇಕಾದ ಒಳ್ಳೇ ವಿದ್ಯೆಗಳು ದೊರಕಬೇಕು. ಹೀಗಾದರೆ ಮತ್ತೆ ಭಾರತ ಮಾತೆಯು ತೇಜಸ್ಸಿನಿಂದ ಮೆರೆಯುವುದರಲ್ಲಿ ಸಂದೇಹವಿಲ್ಲ. ಅಂತೆ ಆಗಲೆಂದು ಭಾರತ ಜನಾಂಗದೊಡನೆ ವಿನಯಪೂರ್ವಕ ವಂದನೆ.

ಪ್ರೇಮ ವಿದ್ಯಾ ಪೀಠ.

ತುಂಗಭದ್ರಾ (ಬಳ್ಳಾರಿ ಜಿಲ್ಲೆ)

ಇದರ ಹೊಸ ವರ್ಷವು ನಾಳೆ ಜುಲೈಯಲ್ಲಿ ಮೊದಲಾಗುತ್ತದೆ ಮಯೂರ್ದೆಯ ಉದ್ಯೋಗ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕಂಡರಿ, ಮೆಟ್ರಿಕ್, ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆಗುವರಲ್ಲದಿಗೂ ಯೋಗ್ಯತೆಗೆ ತಕ್ಕಂತೆ ವಿಧವಿಧವಾದ ಕೋರ್ಸ್‌ಗಳಿವೆ. ಪ್ರೊಸ್ಪೆಕ್ಟಸ್ ಮಾಹಿತಿಗಾಗಿ ಕೂಡಲೆ 2 ಆಣೆ ಸ್ಟಾಂಪು ಇಟ್ಟು ಬರೆಯಿರಿ

ಮಹೋಪಾಧ್ಯಾಯ ಡಾ. ಸುಮತಿಬಾಯಿ,
ಬಿ ಎ., ಎಲ್. ಟಿ, ಎಫ್. ಪಿ ಎಮ್. ಎಸ್.,
ಭಿಷಗ್ಯತ್ನ, ರಿಜಿಸ್ಟ್ರಾರ್,

ಕೊಡಗು

ಮೇ ತಾ ೭ನೇ ಶುಕ್ರವಾರ ೧೯೩೬.

ನಾಗರಿಕ ಸ್ವಾತಂತ್ರ್ಯ ರಕ್ಷಣೆ.

ಯಾವ ದೇಶವೇ ಆಗಲಿ ಅಭಿವೃದ್ಧಿಗೊಳ್ಳಬೇಕಾದರೆ ಅಲ್ಲಿಯ ಜನರು ಚಳವಳಿಯನ್ನು ನಡಿಸಬೇಕಾಗಿದೆ. ಈ ಚಳವಳಿಯು ಹಲವು ವಿಧಾನಗಳಲ್ಲಾಗಬಹುದು; ಮುಖ್ಯವಾಗಿ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ರೂಪಗಳಿಂದಾಗುವುದು. ಈ ಯಾವ ವಿಧಾನದಲ್ಲೇ ಆಗಲಿ ನ್ಯಾಯಕ್ಕೆ ಸ್ವಾತಂತ್ರ್ಯವು ಇದ್ದೇ ಇರಬೇಕು. ಯಾವ ವ್ಯಕ್ತಿಗೇ ಆಗಲಿ ತನ್ನ ಅಭಿಪ್ರಾಯವನ್ನು ಮಾತಿನ ಮೂಲಕವಾಗಲೀ, ಬರಹ ಮೂಲಕವಾಗಲೀ ಜಾಹೀರಂಗಪಡಿಸುವ ಸ್ವಾತಂತ್ರ್ಯವು ಇಲ್ಲದ ರಾಜ್ಯವನ್ನು ನಾಗರೀಕ ರಾಜ್ಯವೆಂದೆನ್ನಲಾಗುವುದಿಲ್ಲ. ಈ ತರಹದ ಸ್ವಾತಂತ್ರ್ಯವು ಮನುಷ್ಯನ ಸ್ವಾಭಾವಿಕ ಹಕ್ಕಿನದ್ದಾಗಿದೆ. ಆನಾಗರೀಕರಾದ ಕಾಡು ಜನರು ಪ್ರದೇಶಗಳಲ್ಲಿ ಮಾತ್ರ ಈ ತರಹದ ಹಕ್ಕು ಜನರಿಗಿರುವುದಿಲ್ಲ. ಇಂಥಾ ಸ್ವಾತಂತ್ರ್ಯದ ಹಕ್ಕಿನ ಬೆಲೆಯನ್ನು ಅರಿತು, ಅದನ್ನು ಕಾಪಾಡಲು ನಾಗರೀಕರೆನಿಸಿಕೊಳ್ಳುವ ಜನಾಂಗಗಳೆಲ್ಲಾ ಸಂಘಸ್ಥಾಪನೆಗಳನ್ನು ಮಾಡಿಕೊಂಡಿವೆ. ಇಂಗ್ಲೆಂಡ್, ಅಮೇರಿಕ, ಫ್ರಾನ್ಸ್ ಮೊದಲಾದ ರಾಜ್ಯಗಳಲ್ಲಿ ಬಲವಾದ 'ಸಿವಿಲ್ ಲಿಬರ್ಟೀಸ್ ಯೂನಿಯನ್'ಗಳು ಸ್ಥಾಪಿಸಲ್ಪಟ್ಟಿವೆ. ಈ ಸಂಸ್ಥೆಗಳು ಯಾವದೊಂದು ಪಾರ್ಟಿಯ ಯಾ ಕೋಮಿನವಲ್ಲ. ಇದರಲ್ಲಿ ಮತಭೇದವೆಣಿಸದೆ ಎಲ್ಲಾ ಪಂಗಡದ ಜನರು ಸೇರಿರುತ್ತಾರೆ. ಅಭಿಪ್ರಾಯಗಳು ಯಾ ಚಳವಳಿಗಳು ಎಷ್ಟೇ ಧಕ್ಕಾವಾಗಿದ್ದರೂ ಕೂಡ ಅವುಗಳ ಪ್ರಚಾರಕ್ಕೆ ಅಡಚಣೆ ಇರಬಾರದೆಂಬುದನ್ನು ವಿವೇಕಿಗಳೆಲ್ಲರೂ ಒಪ್ಪುವಂಥಾದ್ದಾಗಿದೆ. ಆದುದರಿಂದ ಪ್ರಜಾ ಪ್ರಭುತ್ವದ ಸುಳಿವು ಇರುವಂಥಾ ದೇಶಗಳಲ್ಲೆಲ್ಲಾ ವ್ಯಕ್ತಿಸ್ವಾತಂತ್ರ್ಯವನ್ನು ಕಾಪಾಡಲು ಪ್ರಯತ್ನಗಳು ಪ್ರಬಲವಾಗಿ ನಡೆಯುತ್ತಿವೆ.

ಸ್ವಾತಂತ್ರ್ಯ ಸರಕಾರ ಪದ್ಧತಿ ಇರುವ ರಾಜ್ಯಗಳ ಸ್ಥಿತಿಯೇ ಮೇಲೆ ಹೇಳಿದಂತಾದ ಮೇಲೆ ಪರ ರಾಷ್ಟ್ರದವರ ಸರ್ಕಾರದಿಂದ ಆಡಳಿತೆಯಲ್ಲಿರುವ ಭಾರತೀಯರ ಸ್ಥಿತಿಯನ್ನಂತೂ ವರ್ಣಿಸಲಾಗುವುದಿಲ್ಲ. ಪರದೇಶೀ ಸರಕಾರಕ್ಕೆ ವಿರುದ್ಧವೆಂದು ತೋರಿ ಬರುವ ಯಾವ ಅಭಿಪ್ರಾಯ ಯಾ ಚಳವಳಿಯನ್ನೇ ಆಗಲಿ ಸುಲಭದಲ್ಲಿ ಅಡಗಿಸಲು ದಬ್ಬಾಳಿಕೆಯು ಈಗ ಇಂಡಿಯಾದಲ್ಲಿ ಪರಮಾವಧಿಯನ್ನು ತಲಪಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಆದುದರಿಂದ ಈ ಅಮೂಲ್ಯವಾದ ಹಕ್ಕನ್ನು ಕಾಪಾಡಲು ಇಂಡಿಯಾದಲ್ಲಿ ಬಲವಾದ ಚಳವಳಿಯನ್ನು ನಡಿಸುವುದು ಅತ್ಯಗತ್ಯವಾಗಿದೆ. ಇದನ್ನರಿತೇ ಭಾರತಭೂಮಿಯ ಏಕ ಮಾತ್ರ ರಾಜಕೀಯ ಸಂಸ್ಥೆಯಾದ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುವ ಪಂಡಿತ ಜವಾಹರ್‌ಲಾಲ್ ನೆಹರೂರವರು ಹಿಂದೂಸ್ಥಾನದಲ್ಲಿ 'ಸಿವಿಲ್ ಲಿಬರ್ಟೀಸ್ ಯೂನಿಯನ್' ಒಂದನ್ನು ಸ್ಥಾಪಿಸುವ ವಿಚಾರದಲ್ಲಿ ಎಲ್ಲಾ ಪಾರ್ಟಿಗಳ ಪ್ರಾಮುಖ್ಯ ಮಹನೀಯರುಗಳ ಮತ್ತು ಕೆಲವು ಪ್ರಮುಖ ಸಂಪಾದಕರುಗಳ ಅಭಿಪ್ರಾಯವನ್ನು ಕೇಳಿರುವುದಾಗಿದೆ. ವ್ಯಕ್ತಿ ಸ್ವಾತಂತ್ರ್ಯವು ಪ್ರತಿಯೊಬ್ಬ ಭಾರತೀಯನಿಗೂ ಇರಬೇಕಾದುದರಿಂದ ಈ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಇರಲಾರವೆಂದು ಭಾವಿಸಬಹುದು. ರಾಜಕೀಯ, ಸಾಮಾಜಿಕ, ಆರ್ಥಿಕ ಸುಧಾರಣೆಗಳಲ್ಲಿರುವ ಭಿನ್ನಾಭಿಪ್ರಾಯಗಳು ಈ ಸಂಸ್ಥೆಯ ಮಟ್ಟಿಗೆ ಅಡ್ಡಿ ಬರಲು ಕಾರಣವಿಲ್ಲ. ಆದರ ಮೇಂದ ಪಕ್ಷದ ಒಬ್ಬಬ್ಬ ಮುಂದಾಳುಗಳು ಮಧ್ಯಗಾಮಿ ಸುಧಾರಕರ ಮೇಲೆ ಪಂಡಿತ ಜವಾಹರ್‌ಲಾಲರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡ, ಅವರು ಪ್ರಾರಂಭಿಸಲೆನ್ನುವ ಈ ಸಂಸ್ಥೆಗೆ ತಾವು ಒತ್ತಾಸೆಯನ್ನು ಕೊಡಲಾರವೆಂದು ಸೂಚಿಸುವುದು ವಿವಾದಕರ. ಜವಾಹರ್‌ಲಾಲರು ಸ್ಥಾಪಿಸಬೇಕೆಂದಿರುವ ಸಂಸ್ಥೆಯು ತೀವ್ರ ಪಕ್ಷದವರ ಯಾ ಯಾವದೊಂದು ಪಾರ್ಟಿಯವರದ್ದಲ್ಲ. ಅದಲ್ಲಿ ಪಾರ್ಟಿ, ಮತ ಜಾತಿ ಭೇದಗಳಿಗೆ ಅವಕಾಶವಿಂಕೂಡದು. ವ್ಯಕ್ತಿ ದ್ವೇಷದಿಂದ ಯಾರಾದರೂ ಇದಕ್ಕೆ ವಿರೋಧಿಸುವುದು ನ್ಯಾಯವಲ್ಲ. ಎಲ್ಲಾ ಪಾರ್ಟಿಯವರೂ ಎಲ್ಲಾ ಸಂಸ್ಥೆಗಳೂ ತಮ್ಮ ಕೆಲಸವನ್ನೂ ಅಡಚಣೆ ಇಲ್ಲದೆ ನ್ಯಾಯಬದ್ಧವಾಗಿ ನಡಿಸಲು ಅವಶ್ಯವಾದ ನಾಗರೀಕ ಸ್ವಾತಂತ್ರ್ಯವನ್ನು ಕಾಪಾಡಲಿಕ್ಕೆ ಎಲ್ಲರೂ ಒಗ್ಗಟ್ಟಾಗಿ ಸೇರಬೇಕಾಗಿದೆ.

ಜವಾಹರ್‌ಲಾಲರ ಈ ಸಲಹೆಗೆ ಈಗಾಗಲೇ ಹಲವು ಪ್ರತಿಧ್ವನಿಯನ್ನು ಸೂಚಿಸುವುದು ಶುಭ ಚಿನ್ಹೆಯಾಗಿದೆ. ಬೊಂಬಾಯಿ ಪ್ರಾಂತ್ಯದಿಂದ ಇದಕ್ಕೆ ಹೆಚ್ಚಿನ ಉತ್ತೇಜನ ದೊರೆಯುತ್ತಿದೆ. ಹಿಂದೂ ಮುಸಲ್ಮಾನರೆಂಬ ಭೇದವೆಣಿಸದೆ ಧುರೀಣರು ಇದಕ್ಕೆ ಸಮ್ಮತಿಯನ್ನೀಯುತ್ತಿರುವುದನ್ನು ನೋಡಿದರೆ ನೆಹರುರವರ ಯೋಜನೆಯು ಬಹು ಬೇಗನೆ ರೂಪಿತಗೊಳ್ಳುವುದು ಖಾತ್ರಿಯಲ್ಲ, ಅದು ಪ್ರಬಲವಾದ ಸಂಸ್ಥೆಯಾಗುವುದೆಂದು ತೋರುತ್ತದೆ. ಭಾರತೀಯ ಮುಂದಾಳುಗಳು ತಮ್ಮೊಳಗಿರುವ ಇತರ ಭಿನ್ನಾಭಿಪ್ರಾಯಗಳನ್ನು ಬಿಟ್ಟು ಈ ವಿಚಾರದಲ್ಲಾದರೂ ಒಗ್ಗಟ್ಟಾಗಿ ಸೇರಿ ಪ್ರತಿಯೊಬ್ಬ ವ್ಯಕ್ತಿಯ ಸ್ವಭಾವಸಿದ್ಧವಾದ ಸ್ವಾತಂತ್ರ್ಯವನ್ನು ಕಾಪಾಡಲು ಪ್ರಯತ್ನಿಸುವರಾಗಿ ಆಶಿಸುತ್ತೇವೆ.

ಜವಿೂನ್ದಾರರ ಸಂಘದ ಪರಿಷತ್ತು

ಕೊಡಗು ಜವಿೂನ್ದಾರರ ಸಂಘದ ಈ ವರ್ಷದ ಸರ್ವೇಸಭೆಯವು ಬರುವ ಜೂನ್ ತಾ. 1 ನೇ ಸೋಮವಾರ ವೀರಾಜಪೇಟೆಯಲ್ಲಿ ನಡೆಯುವುದು. ಇದರ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಮದ್ರಾಸಿನ ಉಜ್ವಲ ರಾಷ್ಟ್ರಭಕ್ತರೂ, ನಿರತ ಧುರೀಣರೂ ಮತ್ತು ಅಲ್ಲಿಯ ಲೆಜಿಸ್ಲೇಟಿವ್ ಕೌನ್ಸಿಲಿನ ಒಬ್ಬ ಮೆಂಬರೂ ಆದ ಶ್ರೀಮತಿ ರುಕ್ಮಿಣಿ ಲಕ್ಷ್ಮಿಪತಿಯವರು ಸಮ್ಮತಿಸಿರುವುದು ಸಂತೋಷಕರವಾಗಿದೆ. ಸ್ತ್ರೀ ಮುಂದಾಳು ಜವಿೂನ್ದಾರರ ಸಂಘದ ಪರಿಷತ್ತಿನ ಅಧ್ಯಕ್ಷಪದವಿಯನ್ನು ಅಲಂಕರಿಸುವುದು ಇದೇ ಪ್ರಥಮ ಆದುದರಿಂದ ಸಮಸ್ತ ಪ್ರಾಂತ್ಯದ ಮಹಿಳೆಯರು ಹೆಚ್ಚಾಗಿ ಈ ಮಹಾ ಸಭೆಗೆ ದಯಮಾಡಿಸುವರಾಗಿ ನಂಬಲಾಗಿದೆ.

ಕೊಡಗಿನ ರಾಜಕೀಯ ಪರಿಸ್ಥಿತಿಯ ಬಿಕ್ಕಟ್ಟಿನ ಸಮಯವಿದು. ಹಿಂದೂ ದೇಶದ ಇತರ ಪ್ರಾಂತ್ಯಗಳಿಗೆಲ್ಲಾ ಪ್ರಾಂತೀಕ ಸ್ವಾತಂತ್ರ್ಯ ಸರ್ಕಾರವು ಮಂಜೂರಾಗಿ, ಅದು ಕೆಲವು ತಿಂಗಳುಗಳಲ್ಲೇ ಜಾರಿಗೆ ಬರಲಿಕ್ಕಿದೆ. ಆದರೆ ಕೊಡಗಿಗೆ ಸುಧಾರಣೆಯ ವಿಷಯ ಏನೊಂದೂ ಸೂಚನೆ ಇಲ್ಲ. ಸುಧಾರಿಸಿದ ಸರ್ಕಾರವನ್ನು ನಡಿಸಲು ಮಧ್ಯವರ್ತಿ ಸರ್ಕಾರದಿಂದ ಪ್ರಾಂತೀಕ ಸರ್ಕಾರಗಳಿಗೆ ವಾರ್ಷಿಕ ಕಪ್ಪ ಕಟ್ಟುವುದಕ್ಕೆ ಕೊಡುವುದನ್ನು ಕುರಿತು ಸರ್ ಒಟ್ಟೋ ನೀಮಿಯರ್‌ರವರು ಒದಿರಿಸಿರುವ ವರದಿಯಲ್ಲಿ ಕೊಡಗಿನ ಮಾತೇ ಇಲ್ಲ. ಆದರೆ ಕೊಡಗನ್ನು ಅನಾಗರೀಕ ಕಾಡು ಜನರ ಪ್ರಾಂತ್ಯವಾಗಿ ಇಡಬೇಕೆಂಬ ಇರಾದೆಯು ಸರ್ಕಾರಕ್ಕೆ ಇರುವಂತೆ ತೋರುತ್ತದೆ. ಈ ಸಮಯದಲ್ಲಿ ಜನರು ತಮ್ಮ ಅಗಾಧವಾದ ಅತೃಪ್ತಿಯನ್ನು ಸೂಚಿಸಿ, ಒಲವಾದ ಚಳವಳಿಯನ್ನು ಹೂಡದೆ ಹೋದರೆ ಸರ್ಕಾರದವರು ಈ ವಿಚಾರದಲ್ಲಿ ಏನೊಂದೂ ಮಾಡಲಿಕ್ಕಿಲ್ಲವೆಂಬುದರಲ್ಲಿ ಸಂಶಯವಿಲ್ಲ.

ದೇಶೀಯರ ಅಸಮಾಧಾನವನ್ನು ಸೂಚಿಸಲು ಜವಿೂನ್ದಾರರ ಸಂಘದ ಮಹಾಸಭೆಯೇ ಉತ್ತಮವಾದ ಅವಕಾಶವಾಗಿದೆ. ಕೊಡಗಿನ ಏಕ ಮಾತ್ರ ರಾಜಕೀಯ ಸಂಸ್ಥೆಯಾದ ಈ ಸಂಘವನ್ನು ಬಲಪಡಿಸಿ, ಅದರ ಮೂಲಕ ಜನರ ಹಕ್ಕು ಬಾಧ್ಯತೆಗಳನ್ನು ಪಡೆಯಲು ಎಲ್ಲರೂ ಒಗ್ಗಟ್ಟಾಗಿ ಯತ್ನಿಸುವುದೇ ಕೊಡಗಿನ ಮುಂದಿನ ಏಳಿಗೆಯ ದಾರಿಯಾಗಿದೆ. ಆದುದರಿಂದ ಕೊಡಗಿನ ನಿವಾಸಿಗಳು ಈ ಪರಿಷತ್ತಿಗೆ ಹೆಚ್ಚಾಗಿ ನೆರೆದು, ಮಹಾ ಸಭೆಯನ್ನು ಜಯಪ್ರದವಾಗಿ ನಡಿಸಿ, ದೇಶಾಭಿವೃದ್ಧಿಯ ಕಾರ್ಯಗಳಿಗೆ ಉತ್ತೇಜನಕೊಡಬೇಕಾದದ್ದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

ಖಾದಿ ಭೂಷಿತ ಪ್ರಥಮ ಗವರ್ನರರು.

ಶ್ರೀ ರಾಘವೇಂದ್ರರಾಯರು ಗವರ್ನರ ಹುದ್ದೆಯನ್ನು ವಹಿಸಿದರು.

ಮಾನ್ಯ ಶ್ರೀ. ರಾಘವೇಂದ್ರರಾಯರು ತಾ 16 ನೇ ಬೆಳಗ್ಗೆ ಮಧ್ಯ ಪ್ರಾಂತದ ಆಕ್ಟಿಂಗ್ ಗವರ್ನರ ಹುದ್ದೆಯನ್ನು ವಹಿಸಿಕೊಂಡರು. ಇವರು ಪ್ರಣಾಮ ಸಮಾರಂಭದಲ್ಲಿಯೂ ಸಹ ಪೂರ್ಣ ಖಾದಿ ಭೂಷಿತರಾಗಿ ಗಾಂಧಿ ಟೊಪ್ಪಿಯಿಂದ ಅಲಂಕೃತರಾಗಿ ತಮ್ಮ ಹುದ್ದೆಯ ಜವಾಬ್ದಾರಿಯನ್ನು ವಹಿಸಿದರು. ಭಾರತದ ಇತಿಹಾಸದಲ್ಲಿ ಪ್ರಥಮ ಖಾದಿ ಭೂಷಿತರಾದ ಗವರ್ನರರೆಂದರೆ ಇವರೇ. ಖಾದಿ ಉಡುಪಿನ ಬಗ್ಗೆ ಅಲ್ಲ ಸಲ್ಲದ ಕ್ಷುಲ್ಲಕ ಅಭಿಪ್ರಾಯಗಳನ್ನಿಟ್ಟುಕೊಂಡು ಖಾದಿ ಪ್ರಚಾರಕ್ಕೆ ವಿಘ್ನಗಳನ್ನುಂಟುಮಾಡುವದಂಲ್ಲೇ ಹೆಮ್ಮೆಪಡುವ ಅಧಿಕಾರ ವರ್ಗದವರು ಇನ್ನಾದರೂ ಖಾದಿ ಧಾರಣೆಯ ವಿಷಯದಲ್ಲಿ ತಮ್ಮ ತಪ್ಪು ಧೋರಣೆಯನ್ನು ಬದಲಾಯಿಸಿ ಒಡಜನಹಿತ ಸಾಧನವಾದ ಖಾದಿ ಉದ್ಯಮಕ್ಕೆ ಬೆಂಬಲವನ್ನೀಡುವರೇ? ಇಂಥಾ ಪ್ರತ್ಯಕ್ಷ ಉದಾಹರಣೆಗಳಿಂದಾದರೂ ಇವರ ತಪ್ಪು ಭಾವನೆಗಳು ದೂರ ಸಂದಾವೇ?

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್.

15 ನೇ ಬೊಂಬಾಯಿ ಅಧಿವೇಶನ.

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸಿನ 15 ನೇ ಅಧಿವೇಶನವು ಬೊಂಬಾಯಿಯಲ್ಲಿ ಶ್ರೀಮತಿ ಮುಲ್ಜಿ ಮನಿಬೆನ್ ಕಾರ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಟ್ರೇಡ್ ಯೂನಿಯನ್ ಸಂಘಗಳ ಅನೇಕ ಮುಖಂಡರೂ, ಹಲವು ರಾಷ್ಟ್ರ ಧುರೀಣರೂ ಮತ್ತು ರಾಷ್ಟ್ರ ಸಭಾಧಿಪತಿ ಶ್ರಿ ಜವಾಹರ್‌ಲಾಲ್ ನೆಹರೂವರೂ ಅಧಿವೇಶನಕ್ಕೆ ದಯಮಾಡಿಸಿ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಎಸ್. ಹೆಚ್. ಜಾಬ್‌ವಾಲರವರೂ ಮತ್ತು ಅಧ್ಯಕ್ಷರೂ ತಮ್ಮ ತಮ್ಮ ಭಾಷಣಗಳಲ್ಲಿ ಭಾರತೀಯರ ಜನ್ಮಸಿದ್ಧ ಹಕ್ಕು ಭಾಧ್ಯತೆಗಳಿಗೆ ಸಂಬಂಧಪಟ್ಟವರು ಅಡಚಣೆಯನ್ನೊಡ್ಡಿರುವುದನ್ನೂ, ಕಾರ್ಮಿಕರ ಹಿತಸಾಧನೆಗೆಂದು ಶತಪ್ರಯತ್ನ ಮಾಡುತ್ತಲಿದ್ದ ಕಾರ್ಮಿಕಾಗ್ರಣಿಗಳ ನಾಯಕರಾದ ಡಿ. ವಿ. ಪಿ. ನಿಂಬ್ಕರ್ ಮೊದಲಾದವರನ್ನೂ ದೇಶಭಕ್ತ ಸುಭಾಷ್ಚಂದ್ರ ಬೋಸರನ್ನೂ ಬಂಧನಕ್ಕೊಳಪಡಿಸಿದ ಸರಕಾರದ ವರ್ತನೆಯನ್ನೂ ಖಂಡಿಸಿ, ಈಗ ಬಂಧಿಸಲಿರುವ ಹೆಸರಾಂಜ್ಯಾಂಗ ರಚನೆಯ ಗುಲಾಮಗಿರಿಯ ಬದಲಾಗಿ ಹೊಸ ಖಂಡನು ಎಂಬದಾಗಿ ಶಪತಪಡಿಸಿ, ಶ್ರಮಜೀವಿಗಳ ಶ್ರೇಯೋಭಿವೃದ್ಧಿಗಾಗಿ ಹಲವು ಸೂಚನೆಗಳನ್ನು ಕೊಟ್ಟರು.

ಅಧಿವೇಶನದಲ್ಲಿ ಪಾಸಾದ ಠರಾವುಗಳ್ಯಾವೆಂದರೆ—

1 ನೇ ಠರಾವು— ಹೊಸ ರಾಜ್ಯಾಂಗ ರಚನೆಯು 'ಇಂಡಿಯಾ ಆಕ್ಟ್'ನ್ನು ಖಂಡಿಸಿ ಭಾರತೀಯರೆಲ್ಲರೂ ಅದನ್ನು ವಿರೋಧಿಸಬೇಕೆಂದೂ, ಕಾನ್ಸ್ಟಿಟ್ಯೂಯೆಂಟ್ ಎಸೆಂಬ್ಲಿಯನ್ನು ನಿಯೋಜಿಸಬೇಕೆಂದೂ ಮಂತ್ರಿಪದವಿ ಸ್ವೀಕರಿಸಬಾರದೆಂದೂ ಸೂಚಿಸುವದಾಗಿತ್ತು.

2 ನೇ ಠರಾವು— ಭಾರತೀಯರ ಜನ್ಮಸಿದ್ಧ ಹಕ್ಕು ಬಾಧ್ಯತೆಗಳನ್ನು ಧ್ವಂಸ ಮಾಡಲು ಸರ್ಕಾರದವರು ಜಾರಿಯಲ್ಲಿಟ್ಟಿರುವ ದಬ್ಬಾಳಿಕೆಯನ್ನು ನಿಷೇಧಿಸಿ, ಕಾಂಗ್ರೆಸು ಈಗ್ಯೆ ಸ್ಥಾಪಿಸಲಿರುವ ಸಿವಿಲ್ ಸ್ವಾತಂತ್ರ್ಯ ಸಂಘಕ್ಕೆ ತನ್ನ ಬೆಂಬಲವನ್ನು ಸೂಚಿಸಿತು.

3 ನೇ ಠರಾವು— ಈಗಿನ ದಬ್ಬಾಳಿಕೆಯ ಆಡಳಿತವನ್ನು ನಿಷೇಧಿಸಿತು

4 ನೇ ಠರಾವು— ಸುಭಾಷ್ಚಂದ್ರಬೋಸ್, ರಾಯಿಕರ್, ನಿಂಬ್ಕರ್, ಯು. ಎನ್. ರಾಯ್, ಮುಕುಂದಲಾಲ್ ಸರ್ಕಾರ್ ಮತ್ತು ಇತರ ರಾಷ್ಟ್ರ ಮುಖಂಡರನ್ನೂ ಡೆಟಿನ್ಯೂಗಳನ್ನೂ ಜೈಲಿನಿಂದ ಬಿಡುಗಡೆಮಾಡಬೇಕೆಂದು ಸೂಚಿಸಿತ್ತು

5 ನೇ ಠರಾವು— ಇಗಿನ ಕಷ್ಟ ಸಮಯದಲ್ಲಿ ನಿಲುಕಿರುವ ಭಾರತದ ಕಷ್ಟಜೀವಿಗಳಾದ ಒಡ ರೈತರನ್ನು ಅಭಿನಂದಿಸಿತು.

6 ನೇ ಠರಾವು— ಜಗತ್ತಿನ ಧನಾಢ್ಯರಾಷ್ಟ್ರಗಳು ನಡೆಸುತ್ತಲಿರುವ ರಾಜ್ಯವಿಸ್ತರಣಾ ಆಶಾಲಸೆಯ ಯುದ್ಧಗಳನ್ನು ನಿಷೇಧಿಸಿತು.

7 ನೇ ಠರಾವು— ರಾಷ್ಟ್ರೀಯ ಕಾಂಗ್ರೆಸು ಮಹಾಸಭೆಯ ಯುದ್ಧ ನಿರೋಧ ಚಳವಳಿಗೆ ಬೆಂಬಲವನ್ನಿತ್ತಿತು.

8 ನೇ ಠರಾವು— ಅಪಸೀನಿಯಾ ಜನರನ್ನು ಅವರ ಶೌರ್ಯ ಸಹಸಾದಿಗಳಿಗಾಗಿ ಅಭಿನಂದಿಸಿತು.

9 ನೇ ಠರಾವು— ಭಾರತದ ಕೂಲಿಗಾರ ಪಕ್ಷದವರಿಗೂ, ಟ್ರೇಡ್ ಯೂನಿಯನ್ ಕಾಂಗ್ರೆಸಿಗೂ, ರಾಷ್ಟ್ರೀಯ ಕಾಂಗ್ರೆಸು ಸಭೆಗೂ ಇರುವ ಸಂಬಂಧವನ್ನು ವ್ಯಕ್ತಗೊಳಿಸಿ ಮುಂದಕ್ಕೆ ಭಾರತ ಸ್ವಾತಂತ್ರ್ಯ ಚಳವಳಿಯಲ್ಲಿ ಕೂಲಿಗಾರ ಪಕ್ಷದವರು ಹೇಗೆ ಭಾಗವಹಿಸಬೇಕೆಂದೂ ಮುಂತಾಗಿ ವಿಷಯಗೊಳಿಸಿ ಅದಕ್ಕಾಗಿ ಹೊಸ ರಾಜ್ಯಾಂಗ ರಚನೆಯ ನಿಷೇಧ, ಇಂಪೀರಿಯಲಿಸ್ಟ್ ಯುದ್ಧಗಳ ವಿರೋಧ, ಸೋವಿಯಟ್ ರಾಜ್ಯಾರಚನೆಯ ರಕ್ಷಣೆ, ಸಿವಿಲ್ ಸ್ವಾತಂತ್ರದ ರಕ್ಷಣೆ ಮತ್ತು ಶ್ರಮಜೀವಿಗಳಾದ ಕೂಲಿಗಾರ ಪಕ್ಷದವರ ಹಿತಸಾಧನೆ ಮೊದಲಾದ ಕಾರ್ಯಕ್ರಮಗಳನ್ನು ಸೂಚಿಸಿತು.

10 ನೇ ಠರಾವು ಕಾಂಗ್ರೆಸು ಸೋಸಿಯಲಿಸ್ಟ್ ಪಾರ್ಟಿಯ ಸ್ಥಾಪನೆ ಮತ್ತು ಅಭಿವೃದ್ಧಿಯ ಒಗ್ಗೆ ಇದನ್ನು ಅಭಿನಂದಿಸಿ ಲಕ್ನೋದಲ್ಲಿ ಶ್ರೀ. ಜವಾಹರ್‌ಲಾಲರ ಪ್ರಯತ್ನಕ್ಕೆ ಅವರಿಗೆ ಅಭಿನಂದನೆಯನ್ನರ್ಪಿಸಿತು.

ಈ ಪ್ರಕಾರದ ಅನೇಕ ಮಹತ್ವದ ಠರಾವುಗಳು ಪಾಸಾಗಿ ಮುಂದಿನ ವರ್ಷದ ಕಾರ್ಯನಿರ್ವಾಹಕ ಮಂಡಳಿಯು ಜವಾಹರ್‌ಲಾಲ್ ನೆಹರೂ ಕಲ್ಕತ್ತೆಯ ಶ್ರೀ ಶಿವನಾಥ ಬೆನರ್ಜಿಯವರು ಅಧ್ಯಕ್ಷರಾಗಿಯೂ, ಮೆ. ಗಳಾದ ಆರ್. ಬಿ. ಕೊಡಿಗೇಕಾರ್, ಆರ್. ಎಸ್. ರೂಯಿಕರ್, ನಾರಾಯಣ್‌ದಾಸ್ ದೇಕಾರ್ ಮತ್ತು ರಾಜಾರಾಮ್ ಶಾಸ್ತ್ರಿ ಇವರುಗಳು ಉಪಾಧ್ಯಕ್ಷರುಗಳಾಗಿಯೂ ಶ್ರೀಮತಿ ಮನಿಬೆನ್ ಮುಲ್ಜಿಯವರು ಜನರಲ್ ಸೆಕ್ರೆಟರಿಯವರಾಗಿಯೂ ಮತ್ತು ಏ ಬಿ ಕಾರ್ನಿಕ ರು ಖಜಾನ್ಜಿಯರಾಗಿಯೂ ಆರಿಸಲ್ಪಟ್ಟರು. ಮುಂದಕ್ಕೆ ಈ ಸಂಸ್ಥೆಯವರು ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಶಕ್ತ ಭಾಗವಹಿಸಿ ಕೆಲಸ ಕಾರ್ಯಗಳನ್ನು ಯಶಸ್ವಿಯಾಗಿ ಮಾಡುವರಾಗಿ ಹಾರೈಸಲಾಗಿದೆ.

ಕೊಡಗು ಜಮಿನ್ದಾರರ ಸಂಘದ ಮಹಾ ಸಭೆಯು.

ಜೂನ್ ತಾರೀಕು 1ನೇ ಸೋಮವಾರ.

ಮೀರಾಜೀಂಪ್ರೇಟೆಯಲ್ಲಿ ಜರಗುವದು.

ಅಧ್ಯಕ್ಷರು—ಮಡಿಕೇರಿಯ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿ ಯಂ. ಎಲ್. ಸಿ. ಯವರು.

[illegible] ಸೆಪ್ಟೆಂಬರ್ [illegible] ಗೆ ತಿಳಿಸಿರುವದಾ[illegible] ಪಡಿಸಿ [illegible] ಲೆಕ್ಕಸೆ[illegible] ಗೆ ತಿಳಿಸಿರು[illegible] ಚಾಮಿನ್ದ್ರರು [illegible] ನಿರ್ಣಯ ಕಳುಹಿಸಿ ಎಲ್ಲರಿಂದ [illegible] ಮಡಿಕೇರಿ 1 ನೇ ಜಿಲ್ಲಾ (ಸೆಷನ್ಸ್, ಫಸ್ಟ್ ಕ್ಲಾ[illegible] 3 ಪೈಯಾಡಿ ಜಿ[illegible] 4 [illegible] ಶ್ರೀನಿವಾಸ, ಎತ್ತ[illegible] 5 [illegible] ಸೇರಿಗಾರನು ಪೂರ್ವಯ[illegible] ಜಮ್ಮಡ ಮಾಸ್ ಪತ್ತಿಂಗಳು [illegible] 1 [illegible] ಪಟೇಕಂಡ [illegible] 3ನೇ ಭಾಗಗಳಲ್ಲಿದ್ದು [illegible] ಮಂಡೆಂ[illegible] ಕೊಂಗುಡ ಎ ಅಪ್ಪ[illegible] ಪೆಕ್ಕಣ್ಣಾಡ ಜ[illegible] ಇ[illegible]

[illegible] ಸಂಸ್ಥೆ

[illegible] ಸಭೆಯ [illegible] ಸಭೆಗಳಲ್ಲಿ ಡಿವಿಡಂ[illegible] ಶೇಕಡಾ 2½ ರಂತೆ ಡಿವಿಡಂ[illegible] 1936 [illegible] ಈ ಬ್ಯಾಂಕು [illegible] ಶೇಕಡ [illegible] ಸಫಲವಾಗಿ [illegible]

[illegible] ಲಾಭವನ್ನು [illegible] ಫಂಡಿಗೆ [illegible] ಪೈಕಿ [illegible] ಈ ಪುಸ್ತಕಗಳನ್ನು [illegible] ಇರುವದು [illegible]

[illegible] ಎಲ್. [illegible] ಜಿಲ್ಲಾ [illegible] ಜಿಲ್ಲಾ [illegible] ಹಕ್ಕುತ್ತಾಯ [illegible] ಕೊಡಗು ಜಮಿನ್ದಾರರ ಸಂಘದ ಕಾರ್ಯದರ್ಶಿಗಳಿಗೆ [illegible] ಸಭೆಯ [illegible] ಸಭೆಯಲ್ಲಿ [illegible] ಸಭೆಯ [illegible] ಸಭೆಯ [illegible] ಸಭೆಯ

ಅಬಿಸೀನಿಯೊದ ವಾರ್ತೆ.

ಮೇ ತಾ. 16.

ಚಕ್ರವರ್ತಿಗಳು ಜಿನೇವಾಕ್ಕೆ ಹೋಗುವರು.

ಅಬಿಸೀನಿಯೂ ಚಕ್ರವರ್ತಿಗಳು ಜಿನೇವಾಕ್ಕೆ ಹೋಗಿ ಸ್ವತಃ ರಾಷ್ಟ್ರಗಳ ಸಂಘದ ಸಭೆಯಲ್ಲಿ ಅಬಿಸೀನಿಯಾಕ್ಕಾದ ಅನ್ಯಾಯವನ್ನು ಕುರಿತು ಚರ್ಚೆಮಾಡಿ ರಾಷ್ಟ್ರ ಸಂಘದ ಮುಖಾಂತರ ಅಬಿಸೀನಿಯೂದ ಸ್ವಾತಂತ್ರ್ಯ ಸಾಧನೆಗೆ ಪ್ರಯತ್ನಿಸುವರೆಂದೂ ಹೇಳಲಾಗಿದೆ.

ಮುಸೋಲಿನಿಯ ಪುತ್ರರೇರ್ವರಿಗೆ ಬಹುವಚನ.

ಮುಸೋಲಿನಿಯವರ ಪುತ್ರರಾದ ಬ್ಯೂನೊ ಮತ್ತು ವಿಟೊರಿಯೋ ಇವರಿಬ್ಬರು ಅಬಿಸೀನಿಯೂ ಯುದ್ಧದಲ್ಲಿ ತೋರಿಸಿದ ಅಪ್ರತಿಮ ಸಾಹಸಗಳಿಗಾಗಿ ಅವರಿಬ್ಬರಿಗೂ ಲೆಫ್ಟನೆಂಟ್ ಪದವಿಗಳನ್ನು ಕೊಡಲಾಗಿದೆ. ಅವರಿಬ್ಬರೂ ಈಗ ಸ್ವದೇಶಕ್ಕೆ ತೆರಳುವವರಿದ್ದಾರೆ. ಇವರಲ್ಲದೆ ಇನ್ನೂ ಅನೇಕರಿಗೆ ಇದೇ ಪ್ರಕಾರದ ಸನ್ಮಾನಗಳು ದಯಪಾಲಿಸಲಾಗಿದೆ

'ಇಸ್ಲಾಂ' ಬಗ್ಗೆ ಖಾನೂನು.

ಅಬಿಸೀನಿಯೂದಲ್ಲಿನ ಇಟೆಲಿ ಶಾಹಿಯ ಪ್ರಥಮ ಖಾನುನಿನ ಪ್ರಕಾರ ಒಗಾಡನ್ ಪ್ರಾಂತದ ಮುಸಲ್ಮಾನ ಪ್ರಜೆಗಳ ಹಿತಾರ್ಥವಾಗಿ ಅರಬೀ ಭಾಷೆಯನ್ನೇ ಅಲ್ಲಿಯ ಕೋರ್ಟು ಭಾಷೆಯಾಗಿ ಮಾಡಿರುವದಲ್ಲದೆ ಅಲ್ಲಿ ಯುದ್ಧದ ದೆಸೆಯಿಂದ ನೆಲಸಮವಾಗಿದ್ದ ಮಸೀದಿಗಳನ್ನು ಹೊಸರುದ್ದಾರಗೊಳಿಸುತ್ತಿರುವರು

ಮೇ ತಾ. 17.

ಅಡ್ಡಿಸ್‌ಅಬಾಬದಿಂದ ಪತ್ರಿಕೋದ್ಯಮಿಗಳನ್ನು ಹೊರದೂಡಿದರು.

ಇಟೆಲಿಯವರ ರಾಜ್ಯಭಾರಕ್ಕೆ ಪ್ರತಿಕೂಲ ಪ್ರಚಾರ ನಡಿಸಿದರೆಂಬ ಅಪಾದನೆ ಪ್ರಕಾರ ಇಟೆಲಿ ಅಧಿಕಾರಿಗಳ ಏಳು ಮಂದಿ ಪತ್ರಿಕೋದ್ಯಮಿಗಳಿಗೆ ರಾಜಧಾನಿಯಿಂದ ತೊಲಗುವಂತೆ ನೋಟೀಸುಕೊಟ್ಟಿರುವದಾಗಿ ತಿಳಿಯು ಬಂದಿದೆ.

ಡ್ಜಿಬಾಟಿಯ ವಿಷಯ.

ಡ್ಜಿಬಾಟಿ ಬಂದರವು ಈಗ ಫ್ರೆಂಚರ ಸ್ವಾಧೀನವಿದೆ. ಅದನ್ನು ಇಟೆಲಿಯವರೇ ವಹಿಸಿಕೊಂಡು ಫ್ರೆಂಚರಿಗೆ ಬೇರೆ ಎಲ್ಲಾದರೂ ಅದೇ ಪ್ರಕಾರದ ಬಂದರನ್ನು ಕೊಡುವರಾಗಿ ಒಂದು ಸೂಚನೆ ಕಳುಹಿಸಿದ್ದರು. ಅದಕ್ಕೆ ಫ್ರೆಂಚ್ ಸರ್ಕಾರವು ಸಮ್ಮತಿಸಿರುವದಿಲ್ಲ.

ಮೇ ತಾ. 18.

ಕೊಳ್ಳೆಗಾರರಿಗೆ ದೇಹಾಂತ ಶಿಕ್ಷೆ.

ರಾಜಧಾನಿಯಲ್ಲೂ ಮತ್ತು ಇತರ ಕಡೆಗಳಲ್ಲೂ ಕೊಳ್ಳೆ ಮತ್ತು ಕೊಲೆ ಮುಂತಾದವುಗಳನ್ನು ಮಾಡುವವರನ್ನು ಗುಂಪು ಗುಂಪಾಗಿರಿಸಿ ಇಟೆಲಿಯವರು ಮೆಶಿನ್‌ಗನ್ನುಗಳಿಂದ ಕೊಂದುಹಾಕುತ್ತಿರುವರು ಈ ಪ್ರಕಾರ ದೇಹಾಂತ ಶಿಕ್ಷೆಯು ಅನೇಕ ಗುಂಪುಗಳ ಮೇಲೆ ವಿಧಿಸಲಾಗಿದೆ

ಮತ್ತೊಬ್ಬ ಅಬಿಸೀನಿಯೂ ರಣಧೀರನು ಮರಿ ಹೊಕ್ಕಿದನು.

ಉತ್ತರ ರಣಾಂಗದ ಸೇನಾಪತಿಯಾಗಿದ್ದ ಡೆಡ್ಜಾಸ್ ಮೆಷ್ ಅಯೆಲುಜಿಯು ಎಂಬವರು ತನ್ನ 200 ಮಂದಿ ಸೈನಿಕರೊಡನೆ ಮೂರ್ಷಲ್ ಬೊಡೋಗ್ಲಿಯೋರವರ ಶರಣು ಹೊಕ್ಕಿರೆಂದು ತಿಳಿಯು ಬಂದಿದೆ.

ಯೂರೋಪಿಯನರನ್ನು ಹೊರದೂಡುತ್ತಿರುವರು.

ಇಟೆಲಿ ಸರ್ಕಾರದವರು ಅಬಿಸೀನಿಯಾದಿಂದ ಎಲ್ಲಾ ಯುರೋಪು ಜನಗಳನ್ನು ತ್ವರೆಯಾಗಿ ಹೊರದೂತ್ತಲಿರುವರು. ಡರೆಡ್ ಕ್ಯಾಸ್ ಸಂಸ್ಥೆಗೆ ಸಂಬಂಧಪಟ್ಟವರನ್ನೂ ಸಹ ಹೊರಕಳುಹಿಸಿರುವರು. ಈಗ ಪುನಃ300 ಮಂದಿ ಯೂರೋಪಿಯನರನ್ನು ಹೊರಕಳುಹಿಸಿರುವರೆಂದು ಹೇಳಲಾಗಿದೆ.

ಮೇ ತಾ. 19.

ಜಯದ ಸಲುವಾಗಿ ಬಿಡುಗಡೆ.

ಅಬಿಸೀನಿಯೂ ಯುದ್ಧದ ಜಯದ ಸಲುವಾಗಿ 498 ಮಂದಿ ಇಟೆಲಿ ಕೈದಿಗಳನ್ನು ಇಟೆಲಿಯವರು ಬಿಡುಗಡೆಮಾಡಿರುವರು. ಅಲ್ಲದೆ 21 ವಯಸ್ಸಿಗೆ ಮೇಲ್ಪಟ್ಟು 55 ವಯಸ್ಸಿನೊಳಗೆ ಆಯುಧ ಹಿಡಿಯಲು ಶಕ್ತನಿರುವ ಪ್ರತಿಯೊಬ್ಬ ಫೇಸಿಸ್ಟ್ ಪಕ್ಷದವನನ್ನೂ ಇಟೆಲಿ ಸೈನ್ಯಕ್ಕೆ ಸೇರಿಸಲಾಗಿರುವದು.

ಕೈಸ್ಯ ಪಾರ್ಸಿಗಳನ್ನೂ ಹೊರದೂಡಿದರು.

ಯಂ. ರೊಸ್ಸೆಯು ಎಂಬ ಫ್ರೆಂಚ್ ಕೈಸ್ಯ ಪಾರ್ಸಿಗಳನ್ನು ಹಾರರಾನಿಂದ ಇಟೆಲಿ ಸರ್ಕಾರವು ಹೊರದೂಡಿತು

ಸಾದರ ವಂದನೆಗಳು.

ಪೊನ್ನಂಪೇಟೆ—ಶ್ರೀಮಂಗಲನಾಡು ಓಟರುಗಳಲ್ಲಿ ಪಿ. ಜಿ. ಮುದ್ದಪ್ಪಯ್ಯನ ವಿಜ್ಞಾಪನೆ.

ಮಹನೀಯರೇ,

ತಾವುಗಳೆಲ್ಲರು ನನ್ನ ಮೇಲೆ ಪ್ರೀತಿ ವಿಶ್ವಾಸವಿಟ್ಟು ಓಟುಕೊಟ್ಟು ನನ್ನನ್ನು ಜಯಶೀಲನನ್ನಾಗಿ ಮಾಡಿದುದಕ್ಕೆ ನನಗೆ ತಮಗಳನ್ನೆಲ್ಲಾ ಪ್ರತ್ಯೇಕ ಪ್ರತ್ಯೇಕವಾಗಿ ಕಂಡು ನನ್ನ ಕೃತಜ್ಞತೆಯನ್ನು ತೋರಿಸಲು ಅನಾನುಕೂಲವಾದ್ದರಿಂದ ಈ ಪತ್ರಿಕೆಯ ಮೂಲಕ ತಮ್ಮನ್ನೆಲ್ಲಾ ತಾವು ಮಾಡಿದ ಸಹಾಯಕ್ಕಾಗಿ ನಾನು ತುಂಬಾ ವಂದಿಸುತ್ತೇನೆ

ಪೊನ್ನಂಪೇಟೆ, ಪಿ. ಜಿ. ಮುದ್ದಪ್ಪಯ್ಯ.
ತಾ ೨೦—5—36.

ಪ್ರಕಟಣೆ.

ನಾವೋಕ್ಲುನಾಡು ಕೊಣಾಜಗೇರಿ ಗ್ರಾಮದಲ್ಲಿರುವ ಮೆ. ಬಟ್ಯಂಡ ಪೌತಿ ಸುಬ್ಬಯ್ಯನವರ ಪತ್ನಿ ಶ್ರೀಮತಿ ಬೆಳ್ಯವ್ವನವರ ಹೆಸರಿನಲ್ಲಿ ಜನೂಬಂದಿ ನಡೆದು ಬರುವ ಭೂಮಿಯನ್ನು ಅವರು ಮೂರಾಟ ಮಾಡುವ ಪ್ರಯತ್ನದಲ್ಲಿದ್ದಾರೆಂದು ಪೌತಿ ಸುಬ್ಬಯ್ಯನವರ ಸ್ವಂತ ತಮ್ಮ ಬೋಪಯ್ಯನಾದ ನಾನು ತಿಳಿಯುತ್ತೇನೆ. ಸದರಿ ಭೂಮಿಯನ್ನು ಕುಟುಂಬ ಹಣದಿಂದ ನನ್ನ ತಂದೆಯವರು ತೆಗೆದುಕೊಂಡು ನನ್ನ ಅಣ್ಣನ ಹೆಸರಿನಲ್ಲಿ ಅಂದರೆ ಪವುತಿ ಸುಬ್ಬಯ್ಯನವರ ಹೆಸರಿನಲ್ಲಿ ಕೊಂಡ ಕೊಂಡದ್ದಾಗಿದೆ. ಆದ್ದರಿಂದ ಸದರಿ ಸೊತ್ತಿನಲ್ಲಿ ತಕರಾರು ಇರುವುದರಿಂದ ಯಾರೂ ಕೊಂಡುಕೊಳ್ಳಕೂಡದು. ಕೊಂಡು ಕೊಂಡರೂ ಸಹ ಅವರಿಗೆ ಹಣವಾಗಲೀ ಭೂಮಿಯಾಗಲೀ ಸಿಕ್ಕಲಾರದು ಎಂಬ ಸಂಗತಿಯನ್ನು ಈ ಮೂಲಕ ತಿಳಿಸಲಾಗಿದೆ.

ಬಿ. ಎ. ಬೋಪಯ್ಯ.

"ಮತ್ತು ಫೆಂಟಿಯೊಳಗೆ ನನ್ನ ವಸ್ತ್ರಯೊಗೆಯುವ ಕೆಲಸಗಳೆಲ್ಲವೂ ಪೂರೈಸಿದವು. 501 ಮಾರ್ಕಿನ ಸಾಬೂನಿಗೆ ನನ್ನ ಅಭಿನಂದನೆ."

ವೆಚ್ಚ ಕಡಿಮೆ. ವಸ್ತ್ರ ಬಾಳಿಕೆ. ಶ್ರಮ ಅತೀ ಕಡಮೆ!

ಟಾಮ್‌ಕೋ ಮಾರಾಟದ ಮಳಿಗೆ, TOMCo ೧೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

501 Soap

ತಯಾರಿಸುವವರು—ತಾತಾ ಆಯಿಲ್ ಮಿಲ್, ಕಂಪೆನಿ ಲಿಮಿಟೆಡ್, ಬೊಂಬಾಯಿ, ಮತ್ತು ತಾತಾಪುರ.

52—51. ಕೊಡಗಿನ ಡಿಸ ್ಟ್ರಿಬ್ಯೂಟರ್—ಬಿ. ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನಿನನ್ನು ಯಾವ ರೂಪದಲ್ಲೂ ಸೇರಿಸಿಲ್ಲ.

"ನವರತ್ನ ಅಲ್ಯಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis niculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನಿನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಬಿನಲ್ಲೂ ಹಾನಿಕರವಾಗದ ಸಂಜೀವಿನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲು ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರು 68, ಕೊಚಿನ್.

ಸ್ಟೋಕಿಸ್ಟ್—ಎ. ಎಸ್. ಮೂಚಯ್ಯ, ಒಟ್ಟಿ ವ್ಯಾಪಾರಿ, ಸುಂಟಿಕೊಪ್ಪ. } ಏಜೆಂಟ್—ವಿ. ಬಿ. ಕಾಮತ್, ಮೆಹದೇವಪೇಟೆ, ಮಡಿಕೇರಿ.

49 ನವರತ್ನ ಫಾರ್ಮಸಿ,

ಇಂದೇ ಆರಂಭಿಸಿರಿ!

ಸುಪ್ರಸಿದ್ಧ

ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯು ಏಣಿಯನ್ನೇರಿರಿ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ಬೆರಗುಮಾಡುವ ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕಾ
32 ವರ್ಷಗಳ ಟಿನ್ನೊಂದಕ್ಕೆ
ಹೆಚ್ಚಿನ ವಿವರಕ್ಕೆ, ದರ್ಪಣ ಹಾ
ಹಾಕಲು ವಿನಹ ಕಳುಹಿಸಿ

ಕಾಮಶಾಸ್ತ್ರ

ಆತಂಕನಿಗ್ರಹ ಫಾರ್ಮಸಿ
52—8

ಹಣ್ಣು ಹಂಪಲುಗಳನ್ನು ಸೇವಿಸಿರಿ.

ಬಾಳೇ ಹಣ್ಣಿನಲ್ಲಿರುವ ಸಾತ್ವಿಕ ಮತ್ತು ಪೌಷ್ಟಿಕ ಆಹಾರ.

ಆರ್ಯಾವರ್ತದಲ್ಲಿ ಬಾಳೇ ಹಂಣುಗಳಿಗೆ ಅತೀ ಪ್ರಾಚೀನ ಕಾಲದಿಂದಲೂ, ಮಹರ್ಷಿಗಳು ಕೂಡಾ ವಿಶೇಷ ಮಹತ್ವ ಕೊಟ್ಟಿರುವರು. ಇತರ ಎಲ್ಲಾ ಫಲಗಳಿಗಿಂತಲೂ ಕದಲೀ ಫಲಗಳನ್ನು ಜಾಸ್ತಿಯಾಗಿ ಉಪಯೋಗಿಸುವ ವಾಡಿಕೆಯು ಅತೀ ಪುರಾತನವಾದ ಮಹಾ ರಾಜರುಗಳ ವರೆಗೆ ವಿಶೇಷವಾಗಿ ಪ್ರಚಾರದಲ್ಲಿದೆ. ವಿಶಾದಶೀ ಮೊದಲಾದ ಉಪವಾಸ ವ್ರತ ದಿನಗಳಲ್ಲಿ ಬಾಳೆ ಹಂಣುಗಳನ್ನು ಫಲಾಹಾರಕ್ಕಾಗಿ ಉಪಯೋಗಿಸುತ್ತಾರೆ. ಧಾರ್ಮಿಕ ದೃಷ್ಟಿಯಿಂದ ಈ ಕದಲೀ ಫಲಕ್ಕೆ ಇಷ್ಟು ಪ್ರಾಧಾನ್ಯವು ಇತರ ಯಾವ ಫಲಕ್ಕೂ ಇಲ್ಲವೆನ್ನಬಹುದು. ದೇವ ಪೂಜಾ ಕಾಲದಲ್ಲಿ ನೈವೇದ್ಯಕ್ಕೆ ಹಂಣು ಕಾಯಿಗೆ ವಿಶೇಷ ಮಹತ್ವವಿದೆ. ಚಿಕ್ಕ ಚಿಕ್ಕ ಗ್ರಾಮಗಳಲ್ಲೂ ಕೂಡ ಪ್ರತಿನಿತ್ಯವೂ ದೇವಸ್ಥಾನಗಳಿಗೆ ಹಂಣು ಕಾಯಿಗಳನ್ನು ತೆಗೆದುಕೊಂಡು ಹೋಗಿ ಸ್ಥಳೀಯ ಪುರುಷರು ದೇವರಿಗೆ ಸಮರ್ಪಣೆ ಮಾಡುವ ಆ ಭಾವಿಕ ಜನರ ವಿಶ್ವಾಸಭಕ್ತಿಯನ್ನು ನೋಡಿದರೆ ರೋಮಾಂಚಕಪಡಬೇಕಾಗಿರುವುದು ಮದುವೆ ಉಪನಯನ ಮೊದಲಾದ ಸವಾರಂಭಗಳಲ್ಲಿ ಬಾಳೆ ಹಂಣು ಮತ್ತು ಸಕ್ಕರೆ ಇವುಗಳನ್ನೂ ಹಂಚುವ ಸಂಪ್ರದಾಯವು ಸರ್ವರಿಗೂ ವಿದಿತವಾಗಿರುವುದು ಕದಲೀ ಫಲಕ್ಕೆ ಆರ್ಯಾವರ್ತದಲ್ಲಿರುವಷ್ಟು ಮಹತ್ವವು ಭೂಲೋಕದ ಯಾವ ರಾಷ್ಟ್ರದಲ್ಲಿಯೂ ಇಲ್ಲವೆಂದು ಹೇಳಬಹುದು. ಈ ಕದಲೀ ಫಲಕ್ಕೆ ಇಷ್ಟು ಮಹತ್ವವು ಏತರಿಂದ ಪ್ರಾಪ್ತವಾಗಿರುವುದೆಂಬ ಒದನ್ನು ಯಾರೂ ವಿಚಾರಕ್ಕೆ ತೆಗೆದುಕೊಳ್ಳುವುದು ಅಪರೂಪ ಸಾಮಾನ್ಯವಾಗಿ ವಿಚಾರ ಮಾಡಿದರೆ ಕದಲೀ ಫಲಗಳಲ್ಲಿ ಅನೇಕ ಜಾತಿಗಳಿದ್ದು, ಆರ್ಯಾವರ್ತದ ಎಲ್ಲಾ ಭಾಗಗಳಲ್ಲೂ ಇಡೀ ವರ್ಷದ ಎಲ್ಲಾ ಋತುಗಳಲ್ಲಿಯೂ ಇದು ನಮಗೆ ಸಿಕ್ಕುತ್ತಿರುವುದು. ಇದರ ಕೃಷಿ ವಿಧಾನವೂ ಕೂಡಾ ಅತೀ ಸುಲಭವಾಗಿದ್ದು ಪ್ರತಿಯೆಂದು ಮನೆಯವರೂ ಇದನ್ನು ನಟ್ಟು ಬೆಳೆಸಲು ಅನುಕೂಲವಿರುವುದು. ಇದಕ್ಕಾಗಿ ವಿಶೇಷ ಹಣ ಖರ್ಚು ಮಾಡಬೇಕಾಗಿಲ್ಲ.

ಯಾರಿಗೋಪ್ಪು ಖಂಡದ ಜನರಿಗೆ ಪರಮಾತ್ಮನು ಈ ಭಾಗ್ಯವನ್ನು ಕೊಟ್ಟಿರುವುದಿಲ್ಲ. ಅವರು ಅಪೇಕ್ಷೆ ಪಡುವಂತೆ ಈ ಫಲವು ಅಲ್ಲಿ ಸಮೃದ್ಧಿಯಾಗಿರುವುದಿಲ್ಲ. ಆಸ್ಟ್ರೇಲಿಯಾ ದೇಶದಲ್ಲಿ ಫಲ ವಸ್ತುಗಳು ವಿಪುಲವಾಗಿರುವವಾದರೂ ನಮ್ಮಲ್ಲಿಯ ಅನೇಕ ವಿಧ ಫಲಗಳು ಅಲ್ಲಿಯ ಹವಾಗುಣದಿಂದ ಅಲ್ಲಿ ಬೆಳೆಯುವುದಿಲ್ಲ ! ಇಷ್ಟಾದರೂ ಆಸ್ಟ್ರೇಲಿಯಾ ದೇಶದವರಂತೆ ಫಲ ವಸ್ತುಗಳ ಮೂಲಕ ಲಾಭ ಪಡೆಯುವಂಥಾ ರಾಷ್ಟ್ರವು ಇನ್ನೊಂದಿಲ್ಲ ! ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ಬೆಳೆಯುವ ಫಲ ವಸ್ತುಗಳು ಆರ್ಯಾವರ್ತದಲ್ಲಿ ಬೆಳೆಯುತ್ತವೆ, ಆದರೆ ಆರ್ಯಾವರ್ತದಲ್ಲಿ ಹುಟ್ಟಿ ಬೆಳೆಯುವ ಫಲ ಪುಷ್ಪಗಳು ಜಗತ್ತಿನ ಅನೇಕ ರಾಷ್ಟ್ರಗಳಿಗೆ ಕನಸಾಗಿರುವುದು. ಅದೇನು ? ನಮ್ಮ ಜನರು ಸದಾ ಕಂಣು ಮುಚ್ಚಿಕೊಂಡು ಧ್ಯಾನಾಸಕ್ತರಾಗಿರುವ ಅಭ್ಯಾಸ ಮಾಳ್ಪರು. ಅವರ ಯೋಗ ನಿದ್ರೆಯು ಇನ್ನೂ ದೂರವಾಗಿಲ್ಲ ! ಇಲ್ಲದೆ ಹೋದರೆ ಇಂಥಾ ಅಪಾರ ಸಂಪತ್ತಿನ ಬೆಂಬಲವು ನಮ್ಮ ರಾಷ್ಟ್ರಕ್ಕಿರುವಾಗ ನಮ್ಮಲ್ಲಿ ದಿನೇ ದಿನೇ ದಾರಿದ್ರ್ಯವು ಹೆಚ್ಚುತ್ತಾ ಒಂದು ಒಡವರ ಹಾಗೂ ನಿರುದ್ಯೋಗಿಗಳ ಸಂಖ್ಯೆಗಳು ಅಪರಿಮಿತವಾಗಿ ಬೆಳೆಯುತ್ತಿರುವುದು. ಇದೇನು ? ನಾವು ದೈವಹೀನರಂದೇ ? ಯಾ ನಮ್ಮ ಅಜ್ಞಾನ ಮತ್ತು ಆಲಸ್ಯ ವೃತ್ತಿಯ ಫಲವಿರಬಹುದು. ಬಾಳೆ ಹಂಣುಗಳನ್ನು ಕ್ರಮದಂತೆ ಒಣಗಿಸಿ ಅವುಗಳನ್ನು ಗಾಳಿ ರಹಿತವಾದ (Vacum) ಟಿನ್ನುಗಳಲ್ಲಿ ಹಾಕಿ ಪ್ಯಾಕ್ ಮಾಡಿ ವಿದೇಶಗಳಿಗೆ ಕಳುಹಿಸಿ ವಿಕ್ರಯಗೊಳಿಸುವ ಸಾಧನವನ್ನು ಅನುಕೂಲಸ್ಥರಾದ ಸುಶಿಕ್ಷಿತ ತರುಣರು ಕೈಕೊಂಡರೆ ದೇಶದ ಸಂಪದಭಿವೃದ್ಧಿಯಾಗಲಾರದೇ ? ಈ ಕಾರ್ಯವು ಹಳ್ಳಿಗಳಲ್ಲಿಯೂ ಅಜ್ಞ ಜನರಿಂದ ಸಾಧ್ಯವಾಗುವಂತಿಲ್ಲ. ಅದರ ವಿಪುಲವಾದ ಜಾಳೆಯ ತೋಟಗಳನ್ನು ಬೆಳೆಯಿಸಿ ಅವರು ಬೇಕಾದಷ್ಟು ಬಾಳೆಯ ಹಣ್ಣುಗಳನ್ನು ಪೂರೈಸಿ ಕೊಡಲು ಸಮರ್ಥರಾಗುವರು ! ಈ ರೀತಿ ಮಾಡಿದರೆ ಸುಶಿಕ್ಷಿತರಿಗೂ ಅಶಿಕ್ಷಿತರಿಗೂ ಸಮಾನ ಲಾಭವಾಗಬಹುದು. ಇರಲಿ, ಇಂಥಾ ಸಮಯವು ಸುದೈವದಿಂದ ನಮ್ಮ ರಾಷ್ಟ್ರಕ್ಕೆ ಬೇಗನೇ ಲಭಿಸದಿರದು !

ಬಾಳೆ ಹಂಣಿನ ಮಹತ್ವವು ಎಷ್ಟಿರಬಹುದೆಂಬದನ್ನು ಈ ಕೆಳಗಿನ ವಿವೇಚನದಿಂದ ತಿಳಿಯಬಂದೀತು. ಅಮೇರಿಕಾದ ಕೊಲಂಬಿಯ ವಿಶ್ವ ವಿದ್ಯಾಲಯದ (University) ವರು ಬಾಳೆ ಹಣ್ಣುಗಳನ್ನು ಸಾತ್ವಿಕ ಆಹಾರವಾಗಿ ಉಪಯೋಗಿಸುವುದರ ಕುರಿತು ಪ್ರಯೋಗ ನಡಿಸುತ್ತಿದ್ದಾರೆ. ರಸಾಯನ ಜೀವನ ಶಾಸ್ತ್ರಜ್ಞರಾದ ಪ್ರೊಫೆಸರ್ ಡಾಕ್ಟರ್ ಎಡ್ವಿಯವರು ಅಮೇರಿಕ ' ಮೆಡಿಕಲ್ ಎಸೋಸಿಯೇಶನ್ ಜರ್ನಲ್' ಎಂಬ ಎಸ ಪತ್ರಿಕೆಯಲ್ಲಿ ಬಾಳೆ ಹಣ್ಣುಗಳ ಗುಣ ಧರ್ಮದ ಕುರಿತು ತಾವು ಮಾಡಿರುವ ಸಂಶೋಧನೆಯ ಫಲಿತಾಂಶವನ್ನು ಕೆಳಗಿನಂತೆ ವಿವರಿಸಿರುವರು:—

1. ದೇಹದಲ್ಲಿ ಉಷ್ಣತೆಯನ್ನು ಹೆಚ್ಚಿಸುವ ಇತರ ಎಲ್ಲಾ ಫಲಗಳಿಗಿಂತಲೂ ಬಾಳೇ ಹಣ್ಣುಗಳು ಯೋಗ್ಯವಾಗಿವೆ. ನೀರಿನ ಅಂಶ ಕಡಿಮೆ ಇದ್ದು ಘನ ಪ್ರಮಾಣವು ಈ ಫಲಗಳಲ್ಲಿ ಜಾಸ್ತಿ ಇದೆ.

2. ಬೇಗನೇ ಕರಗುವ ಷರ್ಕರಾಂಶವು ಇದರಲ್ಲಿ ಜಾಸ್ತಿ ಇರುವುದರಿಂದ ಜೀವನ ಶಕ್ತಿಯನ್ನು ವೃದ್ಧಿಗೊಳಿಸಲು ಸಹಕಾರಿಯಾಗಿದೆ.

3. ತಾಜಾ ಹಣ್ಣುಗಳಲ್ಲಿ ಫ್ಲೋರಿನ್ ಎಂಬ ಸತ್ವವು ಕಡಿಮೆ ಪ್ರಮಾಣದಲ್ಲಿರುವುದರಿಂದ ಬೇರೆ ಫಲಗಳಿಂದ ಫ್ಲೋರಿನ್ ಸತ್ವವನ್ನು ಪಡೆಯದೇನೇ ಉಷ್ಣತೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುವುದು.

4 ಈ ಫಲಗಳಲ್ಲಿಯ ವಿಷ ಪದಾರ್ಥವು ಜೀರ್ಣಕಾರಿಯಾಗಿದ್ದು ಸಿಹಿ ಮೂತ್ರ (Daibetes) ಮತ್ತು ಸ್ಪ್ರೂ ಎಂಬ ರೋಗಿಗಳಿಗೂ ಚಿಕ್ಕ ಬಾಲಕರಿಗೂ ಫಲಕಾರಿಯಾಗಿದೆ.

5. ಬಾಳೇ ಹಣ್ಣಿನಲ್ಲಿ ಸುಂಣ (Calcium) ಮೆಗ್ನೇಶಿಯಂ (Magnesium) ಗಂಧಕ (Sulpher) ಲೋಹ (Iron) ತಾಮ್ರ (Copper) ಸಮ ಪ್ರಮಾಣದಲ್ಲಿದ್ದು ಆಹಾರ ದೃಷ್ಟಿಯಿಂದ ಉತ್ತೇಜಕವಾಗಿದೆ

6. ರಕ್ತದೊಳಗಿನ ಕ್ಷಾರವನ್ನು ವೃದ್ಧಿಗೊಳಿಸಿ ಸಾಮಾನ್ಯ ದುರ್ಗುಣಗಳನ್ನು ನಾಶ ಪಡಿಸುತ್ತದೆ.

7. ಹೇಮೋ ಗ್ಲೋಬಿನ್ ಎಂಬ ತತ್ವವನ್ನು ವೃದ್ಧಿಗೊಳಿಸಿ ರಕ್ತದೊಳಗಿನ ಕೆಂಪು (Red corpuscles) ಅಣುಗಳನ್ನು ಹೆಚ್ಚಿಸುತ್ತದೆ.

8. ಬಾಳೆ ಹಂಣು ಮತ್ತು ಹಾಲು ಒಟ್ಟಿಗೆ ಸೇವಿಸುವುದರಿಂದ ಶಾಸ್ತ್ರೀಯ ರೀತಿಯಿಂದ ಸಂಪೂರ್ಣ ಆಹಾರವಾಗುತ್ತದೆ. ಇದರಿಂದ ವಿಟಮಿನ್ ಎಂಬ ಜೀವನ ಶಕ್ತಿಯ ತತ್ವಗಳು ಸಪ್ರಮಾಣದಲ್ಲಿ ಸಿಗುವಂತಾಗಿ ದುರ್ಗುಣಹಾರವು ಷರ್ಕರಾಂಶದಿಂದ ಕೂಡಿ ಪೋಷಿಸಲ್ಪಡುತ್ತದೆ.

9. ತಿನ್ನುವ ಬಾಳೆ ಹಣ್ಣುಗಳು ಚೆನ್ನಾಗಿ ಪಕ್ವವಾಗಿದ್ದು ಹೊರಗಿನ ತೊಗಲು ಸ್ವಲ್ಪ ಕೆಪ್ಪು ಛಾಯೆಯುಳ್ಳದಾಗಿ ಒಳಗಿನ ಹಂಣು ಬೆಣ್ಣೆಯಂತಿರುವುದು ಉತ್ತಮ.

10. ಬಾಳೆ ಹಂಣಿನ ಸತ್ವಗಳು ಕರುಳುಗಳ ಪಚನ ಕ್ರಿಯೆಗೆ ಸಹಾಯಕವಾಗುತ್ತವೆ.

11. ರಾಸಾಯನಿಕ ಶೋಧದಂತೆ ಹಂಣಾಗದ (ಕಾಯಿ) ಮತ್ತು ಒಳ್ಳೇ ಪಕ್ವವಾದ ಬಾಳೇ ಹಂಣಿನಲ್ಲಿ ಸಿಗುವ ಸತ್ವಗಳು ಈ ರೀತಿ ಇವೆ—

	ಕಾಯಿ ಶೇಕಡ ಪ್ರಮಾಣ.	ಹಣ್ಣು ಶೇಕಡ ಪ್ರಮಾಣ.
ನೀರು	70-92	63-78
ಪಿಷ್ಟ ಪದಾರ್ಥ (Starch)	12-06	ಅತ್ಯಲ್ಪ
ಷರ್ಕರಾಂಶ (Grape sugar)	0-68	20-47
ಆಲ್ಬುಮಿನೊಯ್ಡು	3-04	4-72
ಕಬ್ಬಿನ ಸಕ್ಕರೆ (Cane sugar)	9-34	-50
ಒಗರು ಪದಾರ್ಥ (Tanin)	6-53	-34
ಏಷ್ (ಬೂದಿ ಯಾ ಕ್ಷಾರ)	1-04	-95
ಇತರ ಘನ ಪದಾರ್ಥಗಳು	4-62	-79
ತಂತುಗಳು (ಇವುಗಳ ದೆಸೆಯಿಂದ ಕಾಯಿ ಕೊಯ್ಯುತ್ತಿರುವಾಗ ಕೈಕಪ್ಪಾಗುತ್ತದೆ.	-36	-17

12. ಕಾಯಿಗಳಿಂದ ಹಿಟ್ಟು ತಯಾರಿಸುತ್ತಾರೆ ಇದರ ಪ್ರಮಾಣವು 20ರಿಂದ 25ಕ ವರೆಗೆ ಸಿಕ್ಕುತ್ತದೆ. ಅಲಿಮಿನೊಯ್ಡ್ ಶೇಕಡ 9ರಷ್ಟು ಇರುತ್ತದೆ.

ಒಟ್ಟಾರೆ ಬಾಳೆ ಹಣ್ಣಿನಷ್ಟು ಸಾತ್ವಿಕ ಮತ್ತು ಶಕ್ತಿವರ್ಧಕ ಆಹಾರವು ಕಿನ್ನಲಿಕ್ಕೆ, ಲಘುವಾದ ಮತ್ತು ಅಲ್ಪಾಯುಸದ ಆಹಾರವು—ಭೂಲೋಕದಲ್ಲಿ ಇನ್ನೊಂದು ಸಿಗುವುದು ದುರ್ಲಭವು !

ಮೇಲಿನ ಸತ್ವದಾಯಕ ಆಹಾರವನ್ನು ನಾವು ಸೇವಿಸುತ್ತಿರುವೆವಾದರೂ ನಮ್ಮ ಆಯುರ್ದಾಯವು ಸರಾಸರಿಯಿಂದ 25 ವರ್ಷ ! ಇತರ ಜನತಾಂಗದವರ ಆಯುರ್ದಾಯವು 40ರಿಂದ 60 ವರ್ಷ ! ಅಜ್ಞಾನದ ಫಲವಿದು.

ಕಿತ್ತಳೆ ಹಂಣು.

ಕಿತ್ತಳೆ ಹಂಣುಗಳು ಬಹಳ ರುಚಿಯಾಗಿರುವುದರೊಡನೆ ಒಳ್ಳೇ ವ್ಯಾಧಿನಿವಾರಕಶಕ್ತಿಯಿಂದ ಕೂಡಿವೆ.

ಮೆಹೋದರಕ್ಕೆ ಕಿತ್ತಳೆಯ ಹಂಣು ಬಹಳ ಉತ್ತಮವಾದ ಔಷಧಿಯೆಂದು ಡಾಕ್ಟರ್ ಸೆನ್ನೋಸೂಕ್ ಎಂಬವರು ನಿರ್ಧರಿಸಿರುವರು.

ಹಾಲು ಮತ್ತು ಕೋಳಿಮೊಟ್ಟೆ, ಇವುಗಳೊಡನೆ ಕಿತ್ತಳೆಯ ಹಂಣಿನ ರಸವನ್ನು ಸೇರಿಸಿದರೆ, ಮಕ್ಕಳಿಗೆ ಅತ್ಯುತ್ತಮವಾದ ಆಹಾರವಾಗುವುದು.

ಕಿತ್ತಳೆಯ ಹಂಣಿನ ರಸದಲ್ಲಿ ಮೂಳೆಯನ್ನು ದೃಢಪಡಿಸುವ ಗುಣವಿರುವುದೆಂದು ಈಚೆಗೆ ರಸಾಯನ ಶಾಸ್ತ್ರಜ್ಞರ ಶೋಧನೆಗಳಿಂದ ಕಂಡು ಬಂದಿದೆ. ಚಿಕ್ಕ ಮಕ್ಕಳ ಆಹಾರದೊಡನೆ ಕಿತ್ತಳೆಯ ಹಂಣಿನ ರಸವನ್ನೂ ಸೇರಿಸಿ ಕೊಡುವುದರಿಂದ, ಅವುಗಳ ಮೂಳೆಯು ಬೇಗನೆ ಚೆನ್ನಾಗಿ ಬಲಿಯುವುದು. ಅನೇಕ ಮಂದಿ ತಾಯಿಯರು ತಮ್ಮ ಮಕ್ಕಳಿಗೆ ಪ್ರತಿ ದಿನವೂ ಕಿತ್ತಳೆಯ ಹಂಣಿನ ರಸವನ್ನು ಕೊಡುವರು ಚಿಕ್ಕ ವಯಸ್ಸಿನಲ್ಲಿ ಬಾಲಕರು ಆಶಾಪೂರ್ವಕವಾಗಿ ಸೇವಿಸಿದ ಕಿತ್ತಳೆಯ ಹಂಣುಗಳು, ಅವರು ವಯಸ್ಕರಾದ ಮೇಲೆ ಧೀರೋದಾತ್ತರಾಗಿ ಬಾಳಲು ಅನುಕೂಲಿಸುವಂತೆ, ಅವರ ಅಸ್ಥಿಪಂಜರಗಳು ಒಳ್ಳೇ ದಾರ್ಢ್ಯವನ್ನೂ, ಪುಷ್ಟಿಯನ್ನೂ, ತಾಳಲು ಅವಕಾಶ ಕೊಡುವುದು. ಕಿತ್ತಳೆಯ ಹಂಣನ್ನೇ ಸೇವಿಸಿದ ಮಕ್ಕಳು, ಆ ಹಂಣಿನ ರಸದಿಂದ ವಂಚಿತವಲ್ಲದೆ ಅವರ ಇತರ ಆಹಾರಗಳಿಂದಲೂ ಕಾಲ್ಸಿಯಂ ಎಂಬ ಭಾಗವನ್ನು ವಿಶೇಷವಾಗಿ ಪಡೆಯುವರು. ಕಿತ್ತಳೆಯ ಹಂಣುಗಳಲ್ಲಿರುವ ವಿಟಮಿನ್‌ಗಳು, ಇತರ ಆಹಾರಪದಾರ್ಥಗಳಲ್ಲಿರುವ ಸಾರವನ್ನೆಲ್ಲ ದೇಹವು ಚೆನ್ನಾಗಿ ಸಂಗ್ರಹಿಸುವಂತೆ ನೋಡುವುವು.

ಪ್ರಕಟಣೆ.

ಇದರಿಂದ ಸೊರ್ಲಬ್ಬಿ ಗ್ರಾಮದ ಏನುಡಿಯಂಡ ಕುಟುಂಬಸ್ಥರಿಗೂ ಮತ್ತು ಪಟೇಲರಿಗೂ ಗ್ರಾಮದ ನಿವಾಸಿಗಳಿಗೂ ಸಹ ತಿಳಿಯಪಡಿಸುವುದೇನೆಂದರೆ ನಮ್ಮ ಮನೆ ಪೌತಿ ಪೂವೈಯ್ಯನವರ ಹೆಂಡತಿ ಸೋಮಕ್ಕನೆಂಬವಳಿಗೆ ಗಂಡನು ಜೀವಿಸಿರುವಾಗ ಎರಡು ಗಂಡು ಮಕ್ಕಳು ಹುಟ್ಟಿರುತ್ತಾರೆ. ಗಂಡನ ಮರಣ ಸಂತರ ಎರಡು ಹೆಣ್ಣು ಮಕ್ಕಳು ಮತ್ತು ಒಂದು ಗಂಡು ಹೀಗೆ ಮೂರು ಜನ ಮಕ್ಕಳು ಜನಿಸಿರುತ್ತಾರೆ. ಹಾಗೆ ಹುಟ್ಟಿದಂತ ಮಗನಿಗೆ ಪೌತಿ ಪೂವೈಯ್ಯನವರ ಬಾಪ್ಪು, ಚರ ಸ್ಥಿರಾಸ್ತಿಗಳನ್ನು ಪರರ ಭೋದನೆಯಿಂದ ತಂದೆಗೆ ಹುಟ್ಟಿದಂತ ಇಬ್ಬರ ಪೈಕಿ ಒಬ್ಬನು ಪಾಲು ಕೊಡುವುದಾಗಿ ವದಂತಿ ಇದೆ. ಸದರಿ ಪೂವೈಯ್ಯನವರು ಪೌತ್ಯಾಗಿ ಕೆಲವು ವರ್ಷಗಳ ನಂತರ ಹುಟ್ಟಿದಂತ ಸೋಮಕ್ಕನ ಮಗುವಿಗೆ ಸದರಿ ಆಸ್ಥಿಯಲ್ಲು ಪಾಲಿಗೆ ಯಾವ ಹಕ್ಕು ಇರುವುದಿಲ್ಲ. ಒಂದು ವೇಳೆ ಪಾಲು ಕೊಡಲ್ಪಟ್ಟಿದ್ದರೂ ಅದು ರದ್ದಾಗತಕ್ಕದ್ದು. ಹಾಗೆ ಮೋಸದಿಂದಲೂ ಪರರ ಬೋಧನೆಯಿಂದಲೂ ಸದರಿ ಹುಡುಗನಿಗೆ ಪಾಲು ಕೊಡುವ ಯಾ ಕೊಟ್ಟಿದ್ದ ಪಕ್ಷ, ಪಾಲು ಕೊಡಲು ಪರವಹಿಸಿದ್ದ ಪೌತ್ರಿ ಪೂವೈಯ್ಯನವರ ನಿಜ ಪುತ್ರನೂ ಮತ್ತು ಪಾಲು ಮಾಡುವ ಯಾ ಮಾಡಿದ ಪಂಚಾಯಿತಿದಾರರು ಸಕಲ ನಷ ಕಷ್ಟಕ್ಕೂ ಗುರಿಯಾಗಬೇಕಾಗಿದೆಂಬದಾಗಿ ಈ ಮೂಲಕ ವಿಷದಪಡಿಸಿಬಿಡುತ್ತೇನೆ.

ಚಿಕ್ಕಬ್ಬೂರು, ಎ. ಯಸ್. ಜೋಯಪ್ಪ.

WANTED.

Candidates for Telegraph and Station Master class. Allowance Rs. 28. Uniform, quarter and passage free. Service essential. Rules and entrance form on annas eight.

Director Royal Telegraph and Rly. Duties College, Bombay No. 14.

12–1.

ಡಾಕ್ಟರ್ ಮೇತ್ಯುಸ್ ಎಬ್ರಹಾಮ್.
ದಂತ ವೈದ್ಯರು.
ಗೀತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ.)

ಈ ತಾ. 15 ರಿಂದ ಬರುವ ಜೂನ್ ತಾರೀಕು 1 ರ ವರೆಗೆ ಇವರು ಊರಿಗೆ ಹೋಗುವ ಕಾರಣ ಅವರ ಆಸ್ಪತ್ರೆಯನ್ನು ಮುಚ್ಚುತ್ತಾರಾಗಿ ತಿಳಿಸುತ್ತಾರೆ.

---

೪೦ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ ಹೊಂದಿದ
ಕರ್ಕಕಂಪನಿ ಔಷಧಿ
ಜ್ವರದ ಗುಳಿಗೆಗಳು.
ಜಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.
ಗಣೇಶ ರಾಮಚಂದ್ರ ಕರ್ಕಿ,
(52–32) ಮತ್ತು ಕಂಪನಿ—
ಗಿರಗಾಂವ, ಮುಂಬಾ

ತುಲಸಿ ಗಿಡವೂ, ಅದರ ಮಹತ್ವವೂ.

(ಲೇಖಕರು:—ಶ್ರೀ. ಜಾರ್ಜ್ ಹರ್ಬರ್ಟ್.)

ತುಲಸಿ ಗಿಡದ ಹೆಸರನ್ನು ಕೇಳದವರೂ, ಅದನ್ನು ನೋಡದವರೂ ನಮ್ಮ ದೇಶದಲ್ಲಿ ಅನೇಕರಿರುವರು. ಆದರೂ ಈ ಗಿಡದ ದಿವ್ಯ ಔಷಧಿಯುಕ್ತ ಗುಣಗಳನ್ನು ಅರಿತವರು ಕಲವು ಮಂದಿ ಎಂದು ಹೇಳಬಹುದು. ಪೂರ್ವಿಕರು ತಮ್ಮ ಮನೆಯ ಮುಂಭಾಗದಲ್ಲಿ ತುಲಸಿಯನ್ನು ನೆಟ್ಟು ಅದಕ್ಕೊಂದು ಕಟ್ಟೆಯನ್ನು ಕಟ್ಟಿ ಆ ಗಿಡವನ್ನು ಸೂಕ್ಷ್ಮವಾಗಿ ಸಾಕಿ, ದೈವಿಕ ಗೌರವವನ್ನು ಅದಕ್ಕೆ ಕೊಟ್ಟು ಪೂಜಿಸುವಂಥಾ ಏರ್ಪಾಡನ್ನು ಮಾಡಿದ್ದು ಮೂಢನಂಬಿಕೆಯೆಂದು ಬಹು ಮಂದಿ ವೈದಿಕ ಶಾಸ್ತ್ರಜ್ಞರು ಇಂದು ಅರಿತಿರುವರು. ಈ ಗಿಡದ ದಿವ್ಯ ಪ್ರಯೋಜನವನ್ನು ಅರಿತ ನಮ್ಮ ಪೂರ್ವಿಕರು ಇದರ ವಿಶೇಷತ್ವವನ್ನು ನಮಗೆ ಮಂದಟ್ಟು ಮಾಡುವ ಉದ್ದೇಶದಿಂದಲೇ ವರ್ಷಕ್ಕೊಮ್ಮೆ ಒಂದು ದಿನವನ್ನು ನಿರ್ಣಯಿಸಿ ಅದಕ್ಕೆ ತುಲಸಿ ಪೂಜೆಯ ದಿವಸವೆಂದು ಹೆಸರನ್ನಿಟ್ಟರು. ಹಿಂದಿನವರು ಈಗಿನ ಜನರ ಮಂದ ಬುದ್ಧಿಯನ್ನು ಅರಿತುಕೊಂಡು ಆರೋಗ್ಯ ಸಂಬಂಧವಾದ ಅನೇಕ ಸೂತ್ರಗಳಿಗೆ ಮತವಿಚಾರದ ಬಂಧನವನ್ನು ಕಲ್ಪಿಸಿ ಜನಸಾಮಾನ್ಯರು ಭಯಭಕ್ತಿಯಿಂದಲೂ ನಮ್ರತೆಯಿಂದಲೂ ಈ ಸೂತ್ರಗಳನ್ನು ತಮ್ಮ ಹಿತಕ್ಕಾಗಿ ಅನುಸರಿಸಿಕೊಂಡು ಬರುವ ಅನುಕೂಲತೆಯನ್ನು ಮಾಡಿದರೆಂದು ನಾವು ತಿಳಿಯಬಹುದು. ಇದೇ ರೀತಿಯಲ್ಲಿ ಅಕ್ಷತೆ ಎರಡರ ಪ್ರದಕ್ಷಿಣೆಯನ್ನು ತೆಗೆಯುವ ಸಂಪ್ರದಾಯವು ಕೂಡ ರೂಢಿಗೆ ಬಂದಿರುವುದು.

ತುಲಸಿ ಗಿಡದ ವಿಶೇಷವೇನೆಂಬುದನ್ನು ಈ ಕುರಿತಾಗಿ ಬರೆಯಲ್ಪಟ್ಟ ವಿವಿಧ ಗ್ರಂಥಗಳಿಂದ ಎತ್ತಿ ತೆಗೆದು ನಮ್ಮ ವಾಚಕರ ಪ್ರಯೋಜನಾರ್ಥವಾಗಿ ಇಲ್ಲಿ ಕೊಟ್ಟಿರುವೆನು. ಇದರಲ್ಲಿರುವ ಪುಷ್ಪಗಳು ನನ್ನವುಗಳಲ್ಲ. ಅವುಗಳ 'ಜೋಡಣೆ'ಯ ಹಗ್ಗ ಮಾತ್ರವೇ ನನ್ನದೆನ್ನಬಹುದು. ನಮ್ಮ ಪುಣ್ಯ ಭೂಮಿಯಲ್ಲಿ ಈಗಿನ ಆಂಗ್ಲ ವೈದ್ಯರ ಆಂಗ್ಲ ವೈದ್ಯೋಪಚಾರಗಳು ತಲೆದೋರುವ ಮೊದಲು ವೈದ್ಯ ವಿದ್ಯೆಯಲ್ಲಿ ಪ್ರವೀಣರೆನಿಸಿಕೊಂಡ ಬಹು ಮಂದಿ ಪೌರ್ವಾಡ್ಯ ವೈದ್ಯರುಗಳಿದ್ದರು. ಅವರ ಖ್ಯಾತಿ ನಮ್ಮ ದೇಶದಲ್ಲಿಯೂ, ಹೊರಗೂ ಪಸರಿಸಿಕೊಂಡಿತ್ತು. ಹಿಂದಿನ ಕಾಲದಲ್ಲಿ ಬಹು ಪ್ರಖ್ಯಾತಿ ಪಟ್ಟು ತನ್ಮಧ್ಯೆ ನಮ್ಮ ದೇಶಸ್ಥರ ಆಚಾರಗೂಢತೆಯಿಂದ ಕ್ಷೀಣವಾಗಿ ಈಗ ತಾನೇ ಪುನರ್ಜೀವಿಸುತ್ತಿರುವ ಯುನಾನಿ, ಆಯುರ್ವೇದಗಳೆಂಬ ಪುರಾತನ ವೈದ್ಯ ಶಾಸ್ತ್ರಗಳಲ್ಲಿ ಕೂಡ ತುಲಸಿ ಗಿಡವು ಉತ್ತಮ ಸ್ಥಾನವನ್ನು ಪಡೆದಿರುವುದು. ಆದುದರಿಂದಲೇ ಮೂನವ ವರ್ಗಕ್ಕೆ ಇಷ್ಟು ಪ್ರಯೋಜನಕಾರಿಯಾದ ಗಿಡಮೂಲಿಕೆಗೆ ಸೇರಿದ ಈ ಗಿಡಕ್ಕೆ ದೈವಿಕ ಮಹಾತ್ಮೆಯನ್ನು ಪೌರ್ವಾಢತೆಯನ್ನೂ ನಮ್ಮ ಹಿರಿಯರು ಕೊಟ್ಟಿರುವರು. ಈ ಕಾರಣದಿಂದಲೋ ಎಂಬಂತೆ ಅವರ ಪ್ರಯೋಗಕ್ಕೆ ಅನುಕೂಲವೂ, ಆವಶ್ಯಕವೂ ಆದ ಸವಿಯೂದ ಪರಿಮಳವನ್ನು ಪರಮಾತ್ಮನು ಈ ಗಿಡಕ್ಕೆ ದಯಪಾಲಿಸಿರುವನು. ಇತ್ತೀಚೆಗೆ ವೈದ್ಯ ಶಾಸ್ತ್ರಜ್ಞರು ಈ ಗಿಡದ ಕುರಿತು ಹೆಚ್ಚಿನ ಪರಿಶೋಧನೆ ಮಾಡಿ ಅವರ ಪ್ರಯೋಜನವನ್ನು ಕಂಡು ಹಿಡಿದಿರುವರು ಡಾಕ್ಟರ್ ಬಿ. ಸಿ. ಬಾಸು ಚೌಧುರಿಯವರು ಇದೇ ಜನವರಿ ತಿಂಗಳ 'ಮೆಡಿಕಲ್ ಡೈಜೆಸ್ಟ್' ಎಂಬ ಪತ್ರಿಕೆಯಲ್ಲಿ ಈ ಗಿಡದ ಪ್ರಯೋಗದ ಕುರಿತಾದ ಒಂದು ವ್ಯಾಖ್ಯಾನವನ್ನು ಬರೆದಿರುವರು.

ಎಲ್ಲೆಲ್ಲಿಯೂ ನುಶಿಗಳ ಕಾಟವು ಬಹಳವಾಗಿ ಜನರನ್ನು ಕಾಡುತ್ತಿದೆ. ಮನೆಯ ವಹಿವಾರದಲ್ಲಿ ತುಲಸಿ ಗಿಡವನ್ನು ನೆಟ್ಟರೆ ನುಶಿಗಳು ಸವಿಸಪ ಬದಲಾರವೆಂಬುದು ವೈದ್ಯರ ಮತ್ತು ಅನುಭವಸಿದ್ಧಾಂತದ ಮಾತು. ತುಲಸಿ ದಳದ ರಸವನ್ನು ತೆಗೆದು ವೈಗೆ ಸವರಿದರೆ ನುಶಿಗಳು ಸವಿಸಪಿಲಲಾರವೆಂಬುವುದು ಬಹು ಮಂದಿ ವೈದ್ಯರ ಅನುಭವವಾಗಿದೆ. ಈ ಕುರಿತು ಸರ್ ಜೋರ್ಜ್ ಬಿಡ್ಡೌಡ್ ಸಾಹೇಬರು ಈ ರೀತಿಯಾಗಿ ಬರೆದಿದ್ದಾರೆ:—

ಕೆಲವು ವರ್ಷಗಳ ಹಿಂದೆ ಬೊಂಬಾಯಿ ನಗರದಲ್ಲಿ 'ಏಶಿಯಾಟಿಕ್ ಸೊಸೈಟಿ ಆಫ್ ಬೊಂಬಾಯಿ' ವತ್ತು 'ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಮ್' ಗಳಿಗೆ ಸ್ಥಳಗಳನ್ನು ಪ್ರತ್ಯೇಕಿಸಿ ಅವುಗಳನ್ನು ಸಂರಪಡಿಸುವ ಕೆಲಸದಲ್ಲಿ ಬಹು ಮಂದಿ ಕೂಲಿ ತೆಲಪದವನ್ನು ಕೈ ಹಚ್ಚಿದರು. ಇವರಲ್ಲಿ ಹೆಚ್ಚಾದವರು ಆ ಪ್ರದೇಶದ ನುಶಿಗಳ ಕಾಟವನ್ನು ತಡೆ ಯಲಾರದೆಯೂ, ಅವುಗಳಿಂದ ಸಂಭವಿಸುವ ಮಲೇರಿಯಾ ಜ್ವರಕ್ಕೆ ತುತ್ತಾಗಿಯೂ ಬಹು ಬಾಧೆಪಡುತ್ತಿದ್ದರು. ಆಗ ಅಲ್ಲಿಯೇ ವೇನೇಜರಾಗಿದ್ದ ಒಬ್ಬ ಹಿಂದೂ ಮಹನೀಯರು ಈ ಕೆಲಸ ನಡೆಯುವ ವಠಾರದ ಸುತ್ತಲೂ ತುಲಸಿ ಗಿಡಗಳನ್ನು ನೆಟ್ಟರಾಗಬಹುದೆಂಬ ಸೂಚನೆಯನ್ನು ಕೊಟ್ಟರು. ಅವರ ಸೂಚನೆಯನ್ನು ಅಧಿಕಾರಿಗಳು ಸ್ವೀಕರಿಸಿ ಹಾಗೆಯೇ ಮಾಡಿದರು. ಕೆಲ ದಿವಸಗಳೊಳಗೇನೇ ನುಶಿಗಳ ಕಾಟವು ಬಹು ಮಟ್ಟಿಗೆ ಕಡಿಮೆಯಾದದ್ದಲ್ಲದೆ ಮಲೇರಿಯಾ ಜ್ವರದ ಬೆನ್ನೆಯೂ ಕೂಡ ನಿಂತು ಹೋಯಿತು. ಇತ್ತೀಚೆಗೆ ನಡೆದ 'ಇಂಪೀರಿಯಲ್' ಮಲೇರಿಯಲ್ ಕಾನ್‌ಫರೆನ್ಸಿನವರು' ಕೂಡ ಮಲೇರಿಯಾ ಜ್ವರಕ್ಕೆ ತುಲಸಿ ಗಿಡವು ಅತ್ಯುತ್ತಮವಾದ ಔಷಧಿಯೆಂದು ಅಭಿಪ್ರಾಯಪಟ್ಟಿರುತ್ತಾರೆ.

ಶ್ರೀ ಗಂಗಾಧರರೆಂಬುವ ಹಿಂದೂ ದೇಶದ ಹೆಸರುವಾಸಿಯಾದ ವೈದ್ಯರೊಬ್ಬರು ಒಳ್ಳೆನೆಣಸಿನ (Ppper) ಪುಡಿಯನ್ನು ತುಲಸಿ ರಸದಲ್ಲಿ ಬೆರಸಿ ಸೇವಿಸುವುದರಿಂದ ಮಲೇರಿಯಾ ಜ್ವರವು ವಾಸಿಯಾಗುವುದೆಂದು ಬರೆದಿರುವರು. ಅಷ್ಟೇ ಅಲ್ಲದೆ ಇತರ ಅನೇಕ ವ್ಯಾದಿಗಳಿಗೆ ತುಲಸಿ ಗಿಡವು ಅತ್ಯುತ್ತಮ ಔಷಧವೆಂದು ಅವರು ಅಭಿಪ್ರಾಯಪಟ್ಟಿರುವರು. ತುಲಸಿ ಗಿಡದ ರಸದ ಲೇಪನದಿಂದ ಅನೇಕ ಚರ್ಮ ರೋಗಗಳೂ, ಹುಳ ಮೇಯುವ ಕಜ್ಜಿಗಳೂ ಗುಣವಾಗುವವು ಎಂದು ಪ್ರಖ್ಯಾತ ವೈದ್ಯ ಚೌಧುರಿಯವರು ಹೇಳುತ್ತಾರೆ. ತುಲಸಿ ದಳದ ರಸದೊಂದಿಗೆ ಸಿಂಬೆ ಹುಣಸಿನ ರಸವನ್ನು ಕಲಸಿ ತಾಗಿಸುವುದರಿಂದ ಕ್ರಿಮಿ ಸಂಬಂಧವಾದ ಎಲ್ಲಾ ಚರ್ಮ ರೋಗಗಳು ಗುಣವಾಗುವುದೆಂದೂ ತುಲಸಿ ರಸವು ಹುಣ್ಣುಗಳಲ್ಲಿ ಆಗುವ ಕೃಮಿಗಳನ್ನು ನಾಶಪಡಿಸಬಲ್ಲುದೆಂದೂ ತಿಳಿದುಬಂದಿದೆ. ತುಲಸಿ ದಳದ ರಸವು ಎಲ್ಲಾ ತರಹದ ಕಿವಿ ನೋವುಗಳಿಗೆ ದಿವ್ಯವಾದ ಔಷಧವು. ಹಾವು ಮುಂಗುಸಿ ಮತ್ತು ಇತರ ವಿಷ ಜಂತುಗಳ ಕಡಿತಕ್ಕೆ ಇತ್ತೀಚೆಗೆ ತುಲಸಿಯ ಪ್ರಯೋಗವನ್ನು ಬಹು ಪ್ರಯೋಜನ ಹೊಂದಿರುವರು. ತುಲಸಿ ದಳವನ್ನು ಜೇನ್ನಾಗಿ ಅದು ಅಷನ್ನು ಬೆಣ್ಣೆಯೊಂದಿಗೆ ಬೆರಸಿ ಹಾವು ಕಚ್ಚಿದ ಗಾಯಕ್ಕೆ ಹಚ್ಚಬೇಕು. ಅದು ವಿಷವನ್ನು ಹೀರಿ ತೆಗೆದು ಕಪ್ಪು ಬಣ್ಣದಿಂದ ಕೂಡಿ ಬಾದಿಸಿದಾಗ ಅದನ್ನು ತೆಗೆದು ಹೊರಗೆ ಒಳ್ಳೆಯದನ್ನು ಹಚ್ಚಬೇಕು. ಇದರಿಂದ ವಿಷವು ಹೆಚ್ಚಾರ ಎಳೆಯಲ್ಪಟ್ಟು ಅನಾಯಾಸವು ಕಾರ್ಯಸಾಧುವಾಗುವುದು. ತುಲಸಿ ಆಯುರ್ವೇದದ ಅನೇಕ ಪ್ರಾಮುಖ್ಯ ಔಷಧಿಗಳೊಂದಿಗೆ ಸೇರಿರುತ್ತಿದ್ದುದರಿಂದ ಅನೇಕರು ಅಭಿಪ್ರಾಯಪಡುತ್ತಾರೆ. ಕೆಮ್ಮು, ಕಫ ಮತ್ತು ಶ್ವಾಸಕೋಶದ ಇತರ ರೋಗಗಳಿಗೆ ತುಲಸಿ ರಸವನ್ನು ಶುಂಠಿ ಜೇನು ಮತ್ತು ನೀರುಳ್ಳಿ ರಸಗಳೊಂದಿಗೆ ಬೆರಸಿ ಕೊಡುವುದರಿಂದ ಒಳ್ಳೆ ಪ್ರಯೋಜನ ಸಿಕ್ಕುವುದು. ತುಲಸಿ ದಳದ ರಸವನ್ನು ಬಿಸಿ ಪಡಿಸಿದ ಹಾಲಿನೊಂದಿಗೆ ಸಕ್ಕರೆ ಹಾಕಿ ಕಾಫಿ, ಚಾ, ಮೊದಲಾದ ಪಾನೀಯಗಳ ಬದಲಾಗಿ ಕುಡಿದರೆ ಅದು ಅಶಕ್ತನನ್ನು ಹೋಗಲಾಡಿಸಿ ನವಚೇತನವನ್ನು ಕೊಡುವುದೆಂದು ಅನೇಕರ ಅನುಭವವಾಗಿದೆ.

ತುಲಸಿ ದಳದ ರಸವು ರುಕ್ಷಗಳ ಅಜೀರ್ಣವನ್ನೂ, ಜೀರ್ಣೋದ್ಭವದ ಇತರ ದೋಷಗಳನ್ನೂ, ಹೊಟ್ಟೆ ನೋವನ್ನೂ ನಿಲ್ಲಿಸಬಲ್ಲುದು. ಹೊಸದಾಗಿ ತೆಗೆದ ತುಲಸಿ ರಸಗಳೊಂದಿಗೆ ಎಲಕ್ಕಿಯ ಪುಡಿಯನ್ನು ಬೆರಸಿ ಕುಡಿಯುವುದರಿಂದ ಕಠಿಣವಾದ ವಾಂತಿಯೂ ಕೂಡ ಉಪಶಮನವಾಗುವುದು. ಪಿತ್ತ ಮೂರ್ಛೆಯನ್ನೂ ಸ್ವಲ್ಪ ರಸದೊಂದಿಗೆ ಕಾಳುಮೆಣಸಿನ ಪುಡಿಯನ್ನು ಬೆರಸಿ ಕುಡಿಯುವುದರಿಂದ ಎಲ್ಲಾ ತರಹದ ಜ್ವರವನ್ನು ತಪ್ಪಿಸಿಕೊಳ್ಳಬಹುದು. ಮನುಷ್ಯನ ಹೊಟ್ಟೆಯಲ್ಲಿ ಮುಖ್ಯವಾಗಿ ಮಕ್ಕಳಲ್ಲಿ ಬರುವ ವಿಧದ ವ್ಯಾದಿಗಳನ್ನುಂಟು ಮಾಡುವ ಸಕಲ ತರಹದ ಹುಳುಗಳನ್ನೂ, ಕ್ರಿಮಿಗಳನ್ನೂ ತುಲಸಿ ರಸವು ನಾಶಪಡಿಸಿ ಹೊರತರುವುದು.

ಇಷ್ಟು ಅಪಾರವಾದ ಗುಣಕಾರಿಯಾದ ಈ ಗಿಡವನ್ನು ನಮ್ಮ ತೋಟಗಳಲ್ಲಿ ಬೆಳೆಯಿಸುವುದು ಅತೀ ಅವಶ್ಯಕ. ನಮ್ಮ ಪೂರ್ವಿಕರು ಸ್ಥಾಪಿಸಿದ ಅನೇಕ ಕಟ್ಟು ಕಟ್ಟಳೆಗಳಲ್ಲಿ ಅವರು ನಮ್ಮ ಪಾರಮಾರ್ಥಿಕ ಹಿತವನ್ನು ಮಾತ್ರವಲ್ಲದೆ ಶಾರೀರಕ ಹಿತವನ್ನು ಕೂಡಾ ಬೆಂಬಿಸಿದ್ದಾರೆಂದು ನಾವು ತಿಳಿದುಕೊಳ್ಳಬಹುದು. ದಿನ ನಿತ್ಯವೂ ಮುಂಜಾನೆ ತುಲಸಿ ಗಿಡದ ಪ್ರದಕ್ಷಿಣೆಯನ್ನು ತೆಗೆಯುವಾಗ ಗಿಡವು ದಳಗಳು ರಾತ್ರಿ ಕಾಲದ ಮಂಜಿನಿಂದ ನೆನೆದು ಬೆಳಿಗ್ಗೆ ಬೀರುವ ಸುವಾಸನೆಯು ನಮ್ಮ ಶಾರೀರಕ ಹಿತಕ್ಕಾಗಿ ಬಹು ಉತ್ತಮವಾದದ್ದು. ಮತ ಭೇದವನ್ನೆಣಿಸದೆ ಸರ್ಕಾರಿಗಳು ಏಕರೀತಿಯಾಗಿ ಉಪಯುಕ್ತವಾಗಿರುವ ಈ ಗಿಡವನ್ನು ಹಿಂದೂಗಳು, ಕ್ರೈಸ್ತರೂ, ಮುಸಲ್ಮಾನರೆಂಬ ಭೇದವಿಲ್ಲದೆ ಎಲ್ಲರೂ ತಮ್ಮ ತಮ್ಮ ಮನೆಯ ಮುಂಭಾಗದಲ್ಲಾಗಲಿ, ವಠಾರದ ಇತರ ಭಾಗಗಳಲ್ಲಿಯಾಗಲಿ ನೆಟ್ಟು ಸುಲಭದಲ್ಲಿ ಕ್ಷೇಮಲಾಭವನ್ನು ಸುಪಾದಿಸಿಕೊಳ್ಳಬಹುದು.

ಫತ್ತೇಪುರ ಸಿಕ್ರಿ ಎಂಬಲ್ಲಿ ಅಕ್ಬರ್ ಬಾದಷಹನ ಪ್ರೀತಿಯ ಹಿಂದೂ ಮಡದಿಯಾಗಿದ್ದ ಜೋಧಾಬಾಯಿ ಅರಮನೆಯು ಇದೆ. ಅರಮನೆಯೂ ಅದರೊಳಗಿನ ಕೋಣೆಗಳೂ, ಇತರ ರಾಜಾಂಗಣಗಳೂ ಈಗಲೂ ಒಳ್ಳೇ ಸ್ಥಿತಿಯಲ್ಲಿವೆ. ಇತ್ತೀಚೆಗೆ ಅರಮನೆಯನ್ನು ಸಂದರ್ಶಿಸಿದವರೊಬ್ಬರು ಅರಮನೆಯ ನಿವಾಸಿಕರೆಲ್ಲರೂ ಎಲ್ಲಿಗೋ ಸ್ವಲ್ಪ ಸಮಯಕ್ಕೆ ಅರಮನೆಯನ್ನು ಬಿಟ್ಟು ಹೋಗಿ ಬರುವರೋ ಎಂಬ ಭಾವನೆಯು ಉಂಟಾಗುತ್ತದೆ ಎಂದು ಬರೆಯುತ್ತಾರೆ. ಅಂದರೆ ಅರಮನೆಯು ಬರಿದಾಗಿದ್ದರೂ ಈಗಲೂ ಮನುಷ್ಯ ನಿವಾಸದ ಕುರುಹುಗಳನ್ನು ತೋರ್ಪಡಿಸುತ್ತದೆ ಎಂದೆನ್ನಬಹುದು. ಈ ಅರಮನೆಯ ರಾಣಿವಾಸಕ್ಕೆ ಸಂಬಂಧಪಟ್ಟ ಕೋಣೆಯ ಹೊರಭಾಗದಲ್ಲಿ ದೊಡ್ಡದೊಂದು ಕಲ್ಲಿನ ಕಟ್ಟಣಿಯೊಳಗೆ ತುಲಸಿ ಗಿಡವನ್ನು ಜೋಧಬಾಯಿಯವರು ಸಾಕುತ್ತಿದ್ದರೆಂದು ಅಲ್ಲಿರುವ ಕುರುಹುಗಳಿಂದ ಕಾಣಬರುತ್ತದೆ. ಕಲ್ಲಿನ ಕಟ್ಟಣಿಗೆಯು ಈಗಲೂ ಇದೆ. ಸುತ್ತಮುತ್ತಲೂ ತುಲಸಿ ಗಿಡಗಳು ಬೆಳೆಯುತ್ತಿದ್ದಾವೆ. ಆ ಕಾಲದಲ್ಲಿ ಕೂಡ ಈ ಗಿಡದ ಪ್ರಯೋಜನವನ್ನು ರಾಜಮನೆತನದವರೂ ಚೆನ್ನಾಗಿ ಅರಿತಿದ್ದರೆಂದು ಇದರಿಂದ ಕಾಣಬರುತ್ತದೆ.

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ
ಭಾರತ ವಿಮೋರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಚ್ಚಗೌರವವನ್ನೂ ಸಂಪಾದಿಸಿರುವ

ಮಂಗಳೂರಿನ

ದಿ ಪ್ಲೊವ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯು, ನಿಮ್ಮ ಬಲುಮೆಯು ಈ ಸಂಸ್ಥೆಯಲಿ
ತಪ್ಪದೆ ವಿಮೆಯನ್ನಿಳಿಸಿ.

ಮೊದಲನೇ ೫ ವರ್ಷಗಳ ಮೌಲ್ಯಪೇತನದ ಫಲಿತಾಂಶವಾಗಿ ಪ್ರತಿಯೊಂದು
1000 ರೂಪಾಯಿಗಳ ವಿಮಾಪತ್ರದ ಮೇಲೆ,—

ವರ್ಷ 1ಕ್ಕೆ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯವೇತನದಲ್ಲಿ ಇಷ್ಟು ಬೋನಸನ್ನು ಹಂಚಿದ ಹಿಂದೀ ವಿಮಾಕಂಪೆನಿಗಳು
ಅತಿ ವಿರಳವೆಂಬುದನ್ನು ಮರೆಯದಿರಿ)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕು.

ಮಾಹಿತಿಪತ್ರ, ವಿವರಣೆಯು ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಡಿಕೇರಿ ಏಜಂಟರು—
ಬಿ. ಜಿ. ಬೆಳ್ಳಪ್ಪನವರು,
ವಸ್ತ್ರಗಳ ವ್ಯಾಪಾರಿ, ಮಡಿಕೇರಿ. (52—13)

ಸುಂಟಿಕೊಪ್ಪ ಏಜಂಟರು—
ಎ. ಎಸ್. ಮೂಚಯ್ಯನವರು,
ವಸ್ತ್ರಗಳ ವ್ಯಾಪಾರಿ, ಸುಂಟಿಕೊಪ್ಪ.

SHIROMANI NARAYANACHARYA

Choukhamba Benares City.

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀವಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವಿಶ್ವವೃದ್ಧಿಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುವಾಗಾದರೆ ನನಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಡೆ ಪ್ರಮಾಣದ ಕಂಠಿಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಿಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ 1ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 4ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಆಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ಏವ ಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕಾಶಿ ಪ್ರಂಬರ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯರ್,

52—38 ಚೌಖಂಬಾ ಬೆನಾರಿಸ್, (ಕಾಶೀ)

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಭೆಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘಗಳ ಮತ್ತು ದವಸ ಭಂಡಾರದ ನಿಯಮನಿಬಂಧನೆಗಳೂ, ಪಾಸ್ ಪುಸ್ತಕಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೇಸುಗಳನ್ನು ಕ್ರಮವಾಗಿ ನಡೆಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಒಮ್ಮೆ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸೆಕ್ರೇರ್ ಕೀಪರ್ ಖರಾರು ಫಾರಮುಗಳೂ ಹೊವಜರ್ ಪುಸ್ತಕಗಳೂ, ರಸೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮ ವಿಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬಂದು ಕೊಳ್ಳಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು

ಮೇನೇಜರ್

"ಕೊಡಗು" ಲಿಮಿಟೆಡ್,

ಮಡಿಕೇರಿ.

ನೋಟೀಸು

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲಾಗಿಡಲು ಒಪ್ಪಿಕೊಂಡಿದ್ದಾರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಸೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸರ್ ಏಜೆಂಟರುಗಳಿಗೆ ಏಜೆಂಟ್‌ಗಳವರ ಜವಾಬ್ದಾರಿಕೆ ಮೇಲೆ ರಸೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪತವಣಿ ಮಾಡಿ ರಸೀತಿ ಪಡೆಯಲೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಸಿ. ಜಿ. ಮುನ್ನಮೆಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಜೆ ಮೊದಮೆಯ್ಯನವರು
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಜಿಯ್ಯನವರು,
ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು
ನಾಪೋಕ್ಲು—ಮೆ. ಜೆಳ್ಳೆಪಂಡ ಯಂ, ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ.—ಸ್ಪಂಬು ಅವ ರಸೀತಿ ಹೊಂದಿಕೊಳ್ಳದೆ ಯಾವ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—

ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.



Goolamhusain Allibhoy & Sons, Ltd.,

26—26 210, Abdulrehman Street, BOMBAY 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್:

ಅಧ್ಯಕ್ಷರು—ಮಾನನೀಯ ಸರ್ ಲಲ್ಲುಭಾಯಿ ಸಾಮಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೊಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲು ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಯ ಸಮ್ಮಂದಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯರ್ ದರದಲ್ಲಿ ಪಾಲಿಸಿ ಕೊಡುವ ಕುರಿತು ಇದಿಂದು ಮನವೊಪ್ಪಿ ನಂಬಿರಿ.
ಪತಿ ವೆತ್ನಿಯರು ಮತ್ತು ವ್ಯಾಪಾರಸ್ಥರು ವಗೈರೆಯವರಿಗೆ ವಿಶೇಷವಾಗಿ (ಜಾಯಿಂಟ್ ಲೈಫ್)
ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಾಸಾತ್ ಕಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ವೆಚ್ಚಬಲಗನ್ನು ಮುಂದಳ
ಪ್ರೀಮಿಯರ್ ವಸೂಲಾತಿ ಇಲ್ಲದೆ ಪೆನ್ಷನ್ ರೀತಿಯಲ್ಲು ಉದಾರತ್ವದಿಂದ ಕೊಡಲು
ಈ ಕಂಪೆನಿಯು ಎಮ್ಮರು ನಿಂತಿದೆ ಎಂದು ನೆನಪಿರಲಿ.
ಮುತುವರ್ಜಿಯಿಂದ ಜೀವನ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ
ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ವಿವರಗಳಿಗೆ—ಬಿ. ಎಸ್. ಐಯ್ಯಪ್ಪು,
ಕೊಡಗು ಚೀಫ್ ಏಜೆಂಟ್,
26—23 ಮಹದೇವಪೇಟೆ, ಮಡಿಕೇರಿ

ಎರಡು ಕೆಲಸಕ್ಕೊಂದೇ ಸಾಬೂನು

"ಮೈಸೂರು ಗಂಧದ ಸಾಬೂನು."



ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ; ಸಂರಕ್ಷಣೆಯನ್ನೂ ಮಾಡುತ್ತದೆ, ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿಡುವರೋ ಯಾರು ಯಾರು ತಮ್ಮ ಚರ್ಮವನ್ನು ಎಚ್ಚರಿಕೆಯಿಂದ ಸೋಡುವರೋ ಅವರೆಲ್ಲರೂ ಉಪಯೋಗಿಸುವುದು

ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—12 **ಬೆಂಗಳೂರು.**

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	37,180— 0—0
ಜಮೂಬುಪ ಶೇವಣಾತಿ	—	25,9035—8—10
ವಸೂಲಾದ ಕ್ಷೇಮನಿಧಿ	—	1,03851— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಬಹುದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಶೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ಸರದಲ್ಲಿಯೂ ಒಂದು ವರ್ಷದ ಶೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಪ್ರೈಜರಶ್
ಸಂಪ್ಯಂಡ ಐ. ಬೆಳ್ಯಪ್ಪನವರು. ರಾ. ಸಾ. ಪಾಂಡಂಡ ಚಂಗಪ್ಪನವರು,

ಸಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ಕಾರ್ಯಾಲಯ 1—2—1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ಕಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರವಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ಕವಾಗಿ, ಆಗಿಂದಾಗ್ಗೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವಾಗ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರಾಯಿಟರ್ಸ್—
ಕೆ. ಟಿ. ಡೋಂಗರೆ ಕಂಪೆನಿ,
(52—12 ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	78,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11 56,12,828

Form of proposal and other particulars will be sent on Application.

Head office:—
Empire of India Life Building,
BOMBAY.

52—26

Branch Office:—
152/3—Commercial Street,
BANGALORE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪಾಶ್ಚಿಮಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಬಿಚಾರಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ

ಈ ವನಸ್ಪತಿ ರಸಾಕರ್ಷಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಾದಿಂದ ತಯಾರಿಸಿದ ಮಧುರಾಮೃತ

ಇದರ ಸೇವನೆಯಿಂದ ಉಷ್ಣ (ಗರವಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣಿಂಳಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರವಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇತರ ಗುಣ ಕಂಡು ಬರುವದು. ಪ್ರಮಾಣ:—ಬೆಳಿಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4 0, 3 ಬಾಟ್ಲಿಗೆ ರೂ 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾಮ್.)

52—37 ಕೊಡಗಿನ ಏಜಂಟರು—ನಾವೆಲ್ಟಿ ಸ್ಟೋರ್ಸ್, ಮಡಿಕೇರಿ
ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.
ಭಕ್ತಾ ಬ್ರದರ್ಸ್, ಕಾಸರಗೋಡು.] ಎ. ಎನ್ ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(೧೮೭೪ರಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	....	ರೂ.	7,62,42,761
ವಾರ್ಷಿಕ ಉತ್ಪತ್ತಿ	....	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	....	ರೂ.	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	....	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	....	ರೂ.	15,53,88 843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೊಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನಾ	ಸಿಂಗಪುರ
ಅಲ್ಲಾಹಾಬಾದು	ಡಕ್ಕಾ	ಲಕ್ನೂ	ಪೂನ	ಸುಕ್ಕೂರು
ಅಂಬಾಲಾ	ದೆಲ್ಲಿ	ಮದ್ರಾಸು	ರಾಯಿಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟಣ
ಕೊಯಂಬತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೇರೇಡ್, ಬೆಂಗಳೂರು,

52—19

ಯಂ. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸಕ್ರೆಟರಿ.)

Printed & published by P. I. Belliappa at 'Kodagu" Press, Mercara for "Kodagu" Ltd.